ಸಂಪುಟ: 01 ಸಂಚಿಕೆ: 89 ಪುಟ: 04 ಬೆಲೆ: 02 ಭಾನುವಾರ ಸೆಪ್ಟೆಂಬರ್ 13 2026 ಮೊ: 7411699198/7406928404

# ಅಜಾತ ಶತ್ರು

ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ
ಜನರ ನುಡಿ.... ಸತ್ಯದ ಧ್ವನಿ...
ಕನ್ನಡ ದಿನ ಪತ್ರಿಕೆ
ಪ್ರದೀಪಕುಮಾರ
ಸಂಪಾದಕರು

GODI TECHNOLOGIES
Imagination Innovation Implementation
Get Your own App & Website
Grow Business Online
Website Designing
App Development
Digital Marketing
E-commerce Website
Software Development
E-paper software
www.godietechnologies.in
7411699198

Volume:01 Issue: 89 Pages:04 Price:02 SUNDAY SEPTEMBER 13 2026 RNI NO: KNKAN/26/A4008 E-mail:ajathashathru2026@gmail.com

## ಸತ್ಯವಾಣಿ ಕಟೋಕ್ತಿ



ಅವರವರ ಸಾಮಾರ್ಥ್ಯಕ್ಕನ್ನುಗುಣವಾಗಿ ಇತರೆ ವ್ಯಕ್ತಿಗಳನ್ನು ಅಳೆಯಬಹುದೇ ವಿನಾ ನಮ್ಮ ವ್ಯಕ್ತಿತ್ವವನ್ನು ನಮಗಿಂತ ಸುಂದರವಾಗಿ ಯಾರು ತಾನೆ ಅಳೆದು ಅರ್ಥೈಸಲು ಸಾಧ್ಯವಿಲ್ಲ.

ವಾಣಿ ಭಂಡಾರಿ.

## ವಿದ್ಯಾರ್ಥಿ ಚುನಾವಣೆ : ನಾಯಕತ್ವ ಬೆಳೆಸುವ ವೇದಿಕೆಯೋ

# ಒಡಕು ಮೂಡಿಸುವ ಅಪಾಯವೋ..?

ಬೆಂಗಳೂರು: ಹಲವು ವರ್ಷಗಳಿಂದ ಕಾಲೇಜುಗಳು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಸ್ಥಗಿತಗೊಂಡಿದ್ದ ವಿದ್ಯಾರ್ಥಿ ಚುನಾವಣೆಗಳನ್ನು ಮತ್ತೆ ನಡೆಸಲು ಸರ್ಕಾರ ಮುಂದಾಗಿರುವುದು ಇದೀಗ ಚರ್ಚೆಗೆ ಗ್ರಾಸವಾಗಿದೆ. ಇದು ನೇರವಾಗಿ ರಾಜಕೀಯವಾಗಿರದಿದ್ದರೂ, ಪ್ರಮುಖ ರಾಜಕೀಯ ಪಕ್ಷಗಳ ಬೆಂಬಲ ವಿದ್ಯಾರ್ಥಿಗಳಿಗೆ ಸಿಗುವುದರಿಂದ ಕ್ಯಾಂಪಸ್‌ಗಳಲ್ಲಿ ರಾಜಕೀಯ ಧ್ರುವೀಕರಣ ಹೆಚ್ಚಾಗುವ ಸಾಧ್ಯತೆಯಿದೆ.

ಮುಖ್ಯವಾಗಿ, ದಶಕಗಳ ನಂತರ ಮರುಕಳಿಸುತ್ತಿರುವ ಈ ಚುನಾವಣಾ ಪ್ರಕ್ರಿಯೆಯಿಂದ ವಿದ್ಯಾರ್ಥಿ ಸಮುದಾಯದಲ್ಲಿ ಪರಸ್ಪರ ಒಡಕು ಹಾಗೂ ವೈಮನಸ್ಸು ಮೂಡುವ ಸಾಧ್ಯತೆಯಿದೆ ಎಂಬ ಆತಂಕ ವ್ಯಕ್ತವಾಗಿದೆ. ಕೇವಲ ಶೈಕ್ಷಣಿಕ ವಾತಾವರಣದಲ್ಲಿರಬೇಕಾದ ಕ್ಯಾಂಪಸ್‌ಗಳು ರಾಜಕೀಯ ಪಕ್ಷಗಳ ಅಖಾಡವಾಗಿ ಬದಲಾಗಿ, ವಿದ್ಯಾರ್ಥಿಗಳ ನಡುವೆ ಅನಗತ್ಯ ಸ್ಪರ್ಧೆ ಮತ್ತು ದ್ವೇಷಕ್ಕೆ ಇದು ದಾರಿ ಮಾಡಿಕೊಡಬಹುದು ಎಂಬ ಅಸಮಾಧಾನ ಪ್ರಬಲವಾಗಿದೆ. ಈ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳ ನೇರ ಅಥವಾ ಪರೋಕ್ಷ ಬೆಂಬಲ ಸಿಗುವುದರಿಂದ, ಇದು ಭವಿಷ್ಯದ ನಾಯಕರನ್ನು ರೂಪಿಸುವ ಬದಲು ವಿದ್ಯಾರ್ಥಿಗಳನ್ನು ರಾಜಕೀಯ ದಾಳಗಳನ್ನಾಗಿ ಬಳಸಿಕೊಳ್ಳುವ ಸಂಚು ಎಂಬ ವಾದವೂ ಕೇಳಿಬರುತ್ತಿದೆ.

ಕೆಲವರ ಪ್ರಕಾರ, ಕಾಲೇಜು ಚುನಾವಣೆಗಳು ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣಗಳನ್ನು ಮತ್ತು ಪ್ರಜಾಸೌಷ್ಠುತೆಯನ್ನು ಬೆಳೆಸಲು ವೇದಿಕೆಯಾಗುತ್ತವೆ (ಉದಾಹರಣೆಗೆ, ರಾಹುಲ್ ಗಾಂಧಿಯಂತಹ ನಾಯಕರು ಸಹ ಹಿಂದೆ ವಿದ್ಯಾರ್ಥಿ ರಾಜಕಾರಣದ ಮೂಲಕವೇ



“ ಕೆಲವರ ಪ್ರಕಾರ, ಕಾಲೇಜು ಚುನಾವಣೆಗಳು ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣಗಳನ್ನು ಮತ್ತು ಪ್ರಜಾಸೌಷ್ಠುತೆಯನ್ನು ಬೆಳೆಸಲು ವೇದಿಕೆಯಾಗುತ್ತವೆ (ಉದಾಹರಣೆಗೆ, ರಾಹುಲ್ ಗಾಂಧಿಯಂತಹ ನಾಯಕರು ಸಹ ಹಿಂದೆ ವಿದ್ಯಾರ್ಥಿ ರಾಜಕಾರಣದ ಮೂಲಕವೇ ಬೆಳೆದುಬಂದಿರುವುದನ್ನು ಸ್ಮರಿಸಬಹುದು). ಸರ್ಕಾರದ ಈ ದಿಢೀರ್ ತೀರ್ಮಾನವು ವಿದ್ಯಾರ್ಥಿ ಸಮುದಾಯದಲ್ಲಿ ಗೊಂದಲ ಹಾಗೂ ಅಸಮಾಧಾನಕ್ಕೆ ಕಾರಣವಾಗಿದ್ದು, ಶೈಕ್ಷಣಿಕ ವಾತಾವರಣದ ಮೇಲೆ ದುಷ್ಪರಿಣಾಮ ಬೀರುವ ಭೀತಿಯೂ ಇದೆ. ಹಲವು ದಶಕಗಳ ಬಳಿಕ ಕಾಲೇಜು ಹಾಗೂ ವಿಶ್ವವಿದ್ಯಾನಿಲಯಗಳಲ್ಲಿ ಮತ್ತೆ ವಿದ್ಯಾರ್ಥಿ ಚುನಾವಣೆಗಳನ್ನು ನಡೆಸಲು ರಾಜ್ಯ ಸರ್ಕಾರ ಮುಂದಾಗಿರುವ ತೀರ್ಮಾನವು ವಿದ್ಯಾರ್ಥಿಗಳಲ್ಲಿ ಒಡಕು ಹಾಗೂ ವೈಮನಸ್ಸಿಗೆ ಕಾರಣವಾಗುತ್ತದೆ ಎಂಬ ಅಸಮಾಧಾನವೊಂದು ವ್ಯಕ್ತವಾಗುತ್ತಿದ್ದು,

ಬೆಳೆದುಬಂದಿರುವುದನ್ನು ಸ್ಮರಿಸಬಹುದು). ಸರ್ಕಾರದ ಈ ದಿಢೀರ್ ತೀರ್ಮಾನವು ವಿದ್ಯಾರ್ಥಿ ಸಮುದಾಯದಲ್ಲಿ ಗೊಂದಲ ಹಾಗೂ ಅಸಮಾಧಾನಕ್ಕೆ ಕಾರಣವಾಗಿದ್ದು, ಶೈಕ್ಷಣಿಕ ವಾತಾವರಣದ ಮೇಲೆ ದುಷ್ಪರಿಣಾಮ ಬೀರುವ ಭೀತಿಯೂ ಇದೆ. ಹಲವು ದಶಕಗಳ ಬಳಿಕ ಕಾಲೇಜು ಹಾಗೂ ವಿಶ್ವವಿದ್ಯಾನಿಲಯಗಳಲ್ಲಿ ಮತ್ತೆ ವಿದ್ಯಾರ್ಥಿ ಚುನಾವಣೆಗಳನ್ನು ನಡೆಸಲು ರಾಜ್ಯ ಸರ್ಕಾರ ಮುಂದಾಗಿರುವ ತೀರ್ಮಾನವು ವಿದ್ಯಾರ್ಥಿಗಳಲ್ಲಿ ಒಡಕು ಹಾಗೂ ವೈಮನಸ್ಸಿಗೆ ಕಾರಣವಾಗುತ್ತದೆ ಎಂಬ ಅಸಮಾಧಾನವೊಂದು ವ್ಯಕ್ತವಾಗುತ್ತಿದ್ದು,

ಇದು ಕ್ಯಾಂಪಸ್‌ಗಳಲ್ಲಿ ರಾಜಕೀಯ ಪಕ್ಷಗಳ ಪ್ರವೇಶ ಹಾಗೂ ಧ್ರುವೀಕರಣಕ್ಕೆ ದಾರಿ ಮಾಡಿಕೊಡುತ್ತದೆ ಎಂಬ ವಾದಗಳು ಕೇಳಿಬರುತ್ತಿವೆ. ಮತ್ತೊಂದೆಡೆ, ಇದು

> “ಸಾಮಾನ್ಯ ವಿದ್ಯಾರ್ಥಿಗಳಿಗೆ ಸಮಾನ ಅವಕಾಶ ಸಿಗುತ್ತದೆಯೇ? ಚುನಾವಣೆ ಗೆಲ್ಲುವ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳ ನಡುವೆ ಗುಂಪುಗಾರಿಕೆ, ವೈಮನಸ್ಸು ಮತ್ತು ವೈಯಕ್ತಿಕ ಸಂಘರ್ಷಗಳು ಉಂಟಾದರೆ ಅದರ ಹೊಣೆ ಯಾರು ಹೊರುತ್ತಾರೆ? ಎಂಬ ಪ್ರಶ್ನೆಯನ್ನು ವಿದ್ಯಾರ್ಥಿ ಸಂಘಟನೆಗಳ ಮುಖಂಡರು ಮುಂದಿಡುತ್ತಾರೆ. ಈ ಹಿಂದೆ ವಿದ್ಯಾರ್ಥಿ ಚುನಾವಣೆಗಳು ನಡೆದ ಸಂದರ್ಭಗಳಲ್ಲಿ ರಾಜಕೀಯ ಸಂಘರ್ಷಗಳು ಕಾಲೇಜು ಆವರಣಕ್ಕೆ ಪ್ರವೇಶಿಸಿದ ಆರೋಪಗಳು ಕೇಳಿಬಂದಿದ್ದವು. ಇದೇ ಕಾರಣಕ್ಕೆ ಹಲವು ವರ್ಷಗಳ ಹಿಂದೆ ವಿದ್ಯಾರ್ಥಿ ಚುನಾವಣೆಗಳಿಗೆ ಕಡಿವಾಣ ಹಾಕಲಾಗಿತ್ತು.

ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸಲು ಸಹಕಾರಿ ಎಂಬ ಅಭಿಪ್ರಾಯವೂ ಇದೆ. ವಿದ್ಯಾರ್ಥಿ ಚುನಾವಣೆಗಳು ಯುವಕರಲ್ಲಿ ನಾಯಕತ್ವ ಗುಣ, ಸಂಘಟನಾ ಸಾಮರ್ಥ್ಯ ಮತ್ತು ಪ್ರಜಾಪ್ರಭುತ್ವದ ಅರಿವು ಬೆಳೆಸಲು ಸಹಕಾರಿಯಾಗಬಹುದು. ಆದರೆ ಚುನಾವಣಾ ಪ್ರಕ್ರಿಯೆಗೆ ರಾಜಕೀಯ ಪಕ್ಷಗಳ ನೇರ ಅಥವಾ ಪರೋಕ್ಷ ಬೆಂಬಲ ದೊರೆತರೆ, ಕಾಲೇಜುಗಳು ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳ ಕೇಂದ್ರವಾಗಿರುವ ಬದಲು ರಾಜಕೀಯ ಚಟುವಟಿಕೆಗಳ ವೇದಿಕೆಯಾಗುವ ಅಪಾಯವಿಲ್ಲವೇ?ಎಂಬ ಪ್ರಶ್ನೆ ಎದುರಾಗಿದೆ.

ವಿದ್ಯಾರ್ಥಿ ನಾಯಕತ್ವದಿಂದಲೇ ಮುಂದೆ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಹಲವು ನಾಯಕರು ಬೆಳೆದಿರುವ ಉದಾಹರಣೆಗಳಿವೆ. ಯುವಜನರಲ್ಲಿ ಸಾರ್ವಜನಿಕ ವಿಚಾರಗಳ ಬಗ್ಗೆ ಆಸಕ್ತಿ

4ನೇ ಪುಟಕ್ಕೆ

## 3 ಮೆಟ್ರೋ ರೈಲು ನಿಲ್ದಾಣಗಳ ಹೆಸರು ಬದಲಿಸಲು ರಾಮಲಿಂಗಾರೆಡ್ಡಿ ಪತ್ರ

ಅ.ಶ. ಸುದ್ದಿ ಬೆಂಗಳೂರು

ಬೆಂಗಳೂರು: ಬಿಟಿಎಂ ಲೇಔಟ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮೂರು ಮೆಟ್ರೋ ರೈಲು ನಿಲ್ದಾಣಗಳ ಹೆಸರನ್ನು ಬದಲಾಯಿಸುವಂತೆ ಅರಣ್ಯ ಸಚಿವ ರಾಮಲಿಂಗಾರೆಡ್ಡಿ ನಮ ಮೆಟ್ರೋ ರೈಲು ನಿಗಮಕ್ಕೆ ಪತ್ರ ಬರೆದಿದ್ದಾರೆ. ಜೆ.ಪಿ.ನಗರ 4ನೇ ಹಂ ಮೆಟ್ರೋ ನಿಲ್ದಾಣವನ್ನುಎಸ್.ಎಸ್.ಪಾಳ್ಯ ಮೆಟ್ರೋ ನಿಲ್ದಾಣವೆಂದು, ತಾವರೆಕೆರೆ ಮೆಟ್ರೋ ನಿಲ್ದಾಣವನ್ನು ಎಸ್.ಜಿ.ಪಾಳ್ಯ ಮೆಟ್ರೋ ನಿಲ್ದಾಣವೆಂದು ಹಾಗೂ ಡೈರಿ ವೃತ್ತ ಮೆಟ್ರೋ ನಿಲ್ದಾಣವನ್ನು ಲಕ್ಕಸಂದ್ರ ಮೆಟ್ರೋ ನಿಲ್ದಾಣವೆಂದು ಮರು ನಾಮಕರಣ ಮಾಡುವಂತೆ ಮೆಟ್ರೋ ರೈಲು ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಬರೆದಿರುವ ಪತ್ರದಲ್ಲಿ ಸಚಿವರು ತಿಳಿಸಿದ್ದಾರೆ.



ನನ್ನ ಮತ ಕ್ಷೇತ್ರವಾದ ಬಿಟಿಎಂ ಲೇಔಟ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಹಾಗೂ ನಿರ್ಮಾಣ ಹಂತದಲ್ಲಿರುವ ಮೆಟ್ರೋ ನಿಲ್ದಾಣಗಳ ಹೆಸರನ್ನು ಆಯಾ ನಿಲ್ದಾಣಗಳು ಇರುವ ಸ್ಥಳೀಯ ಪ್ರವೇಶದ ಹೆಸರು, ಐತಿಹಾಸಿಕ ಹಾಗೂ ಭೌಗೋಳಿಕ ಮಹತ್ವ ಮತ್ತು ಸಾರ್ವಜನಿಕರ ಸಾಮಾನ್ಯ ಅಭಿಪ್ರಾಯವನ್ನು ಪರಿಗಣಿಸಿ ಸೂಕ್ತವಾಗಿ ಮರುನಾಮಕರ ಮಾಡುವ ಅಗತ್ಯವಿದೆ ಎಂದು ಅವರು ಹೇಳಿದ್ದಾರೆ. ಪ್ರಸ್ತುತ ಕೆಲವು ಮೆಟ್ರೋ ನಿಲ್ದಾಣಗಳ ಹೆಸರುಗಳು ನಿಲ್ದಾಣ ಇರುವ ನಿಖರ ಸ್ಥಳ ಅಥವಾ ಆ ಪ್ರದೇಶದ ಜನರಿಗೆ ಹೆಚ್ಚು ಪರಿಚಿತವಾಗಿರುವ ಸ್ಥಳೀಯ ಹೆಸರನ್ನು ಪ್ರತಿಬಿಂಬಿಸುವುದಿಲ್ಲ.

## ಅಪಘಾತದಲ್ಲಿ ಗಾಯಗೊಂಡ ಮಕ್ಕಳ ಆರೋಗ್ಯ ವಿಚಾರಿಸಿದ ಶಾಸಕ ದೊಡ್ಡನಗೌಡ ಪಾಟೀಲ



ಅ.ಶ. ಸುದ್ದಿ ಕುಷ್ಟಗಿ

ಕುಷ್ಟಗಿ: ರಾಮದುರ್ಗದಿಂದ ಮಂತ್ರಾಲಯಕ್ಕೆ ತೆರಳುತ್ತಿದ್ದ ಮಿನಿ ಬಸ್‌ವೊಂದು ಮದಲಗಟ್ಟಿ ಗ್ರಾಮದ ಸಮೀಪ ಅಪಘಾತಕ್ಕೀಡಾದ ವಿಷಯ ತಿಳಿದ ತಕ್ಷಣ ಶಾಸಕ ದೊಡ್ಡನಗೌಡ ಎಚ್. ಪಾಟೀಲ ಅವರು ಕುಷ್ಟಗಿ ಆಸ್ಪತ್ರೆಗೆ ಭೇಟಿ ನೀಡಿ, ಚಿಕಿತ್ಸೆ ಪಡೆಯುತ್ತಿದ್ದ ಮಕ್ಕಳ ಆರೋಗ್ಯದ ಕುರಿತು ವಿಚಾರಿಸಿದರು.

ಈ ಸಂದರ್ಭದಲ್ಲಿ ವೈದ್ಯರಿಂದ ಮಕ್ಕಳಿಗೆ ನೀಡಲಾಗುತ್ತಿರುವ ಚಿಕಿತ್ಸೆ ಹಾಗೂ ಆರೋಗ್ಯ ಸ್ಥಿತಿಗತಿಯ ಬಗ್ಗೆ ಮಾಹಿತಿ ಪಡೆದುಕೊಂಡರು.

ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಹೆಚ್ಚಿನ ಚಿಕಿತ್ಸೆ ಹಾಗೂ ಅಗತ್ಯ ವೈದ್ಯಕೀಯ ಆರೈಕೆಗಾಗಿ ಮಕ್ಕಳನ್ನು ಕೊಪ್ಪಳ ಜಿಲ್ಲಾಸ್ಪತ್ರೆಗೆ ಕಳುಹಿಸಲಾಗಿದೆ ಎಂದು ತಿಳಿಸಿದರು. ಮಕ್ಕಳು ಶೀಘ್ರವಾಗಿ ಸಂಪೂರ್ಣ ಗುಣಮುಖರಾಗಲಿ ಎಂದು ಹಾರೈಸಿದ ಶಾಸಕ ದೊಡ್ಡನಗೌಡ ಪಾಟೀಲ, ಮಕ್ಕಳಿಗೆ ಅಗತ್ಯವಿರುವ ಎಲ್ಲ ರೀತಿಯ ಚಿಕಿತ್ಸೆ ಹಾಗೂ ವೈದ್ಯಕೀಯ ನೆರವು ದೊರೆಯುವಂತೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು. ಪೋಷಕರು ಆತಂಕಪಡದೆ ಧೈರ್ಯದಿಂದಿರಬೇಕು. ಮಕ್ಕಳ ಆರೋಗ್ಯದ ಕುರಿತು ನಿರಂತರವಾಗಿ ಗಮನಹರಿಸಲಾಗುವುದು ಎಂದು ಅವರು ಭರವಸೆ ನೀಡಿದರು.

## ಅನರ್ಹರಿಗೆ ಪಿಂಚಣಿ : ವಾರ್ಷಿಕ 2,000 ಕೋಟಿ ಸೋರಿಕೆ ಆರೋಪ

### ಕಟ್ಟುನಿಟ್ಟಿನ ಪರಿಶೀಲನೆಗೆ ಕೆ.ಆರ್.ಎಸ್ ಪಕ್ಷದ ಜಿಲ್ಲಾ ಅಧ್ಯಕ್ಷ ಗಣೇಶ್ ಅಮೃತ ಆಗ್ರಹ

ಅ.ಶ. ಸುದ್ದಿ ಗಂಗಾವತಿ

ಗಂಗಾವತಿ: ರಾಜ್ಯದ ವಿವಿಧ ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳಲ್ಲಿ ಅರ್ಹತೆ ಇಲ್ಲದವರಿಗೂ ಪಿಂಚಣಿ ನೀಡಲಾಗುತ್ತಿದ್ದು, ಇದರಿಂದ ಸರ್ಕಾರದ ಬೊಕ್ಕಸಕ್ಕೆ ಪ್ರತಿವರ್ಷ ಸುಮಾರು ?2,000 ಕೋಟಿ ನಷ್ಟವಾಗುತ್ತಿದೆ ಎಂದು ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್ ಎಸ್) ಪಕ್ಷದ ಜಿಲ್ಲಾ ಅಧ್ಯಕ್ಷ ಗಣೇಶ್ ಅಮೃತ ಆರೋಪಿಸಿದ್ದಾರೆ.

ಆರ್ ಟಿ ಐ ಮೂಲಕ ಪಡೆದ ಮಾಹಿತಿಯ ಆಧಾರದಲ್ಲಿ ರಾಜ್ಯದ ಆರು ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳಲ್ಲಿ ಒಟ್ಟು 81,66,558 ಫಲಾನುಭವಿಗಳಿದ್ದು, ಅವರಲ್ಲಿ 26,04,524 ಮಂದಿ ಅರ್ಹತಾ ಮಾನದಂಡಗಳನ್ನು ಪೂರೈಸದವರಾಗಿದ್ದಾರೆ ಎಂದು ಅವರು ತಿಳಿಸಿದ್ದಾರೆ. ಅರ್ಹತೆ ಇಲ್ಲದ ಫಲಾನುಭವಿಗಳಿಗೆ ಪಿಂಚಣಿ ಮುಂದುವರಿಯುತ್ತಿರುವುದರಿಂದ ಸಾರ್ವಜನಿಕರ ತೆರಿಗೆ ಹಣ ಪೋಲಾಗುತ್ತಿದೆ.



ನಿಜವಾದ ಅರ್ಹ ಫಲಾನುಭವಿಗಳಿಗೆ ಸರ್ಕಾರದ ಸೌಲಭ್ಯ ತಲುಪುವಂತೆ ಅಧಿಕಾರಿಗಳು ಫಲಾನುಭವಿಗಳ ಅರ್ಹತೆಯನ್ನು ನಿಯಮಿತವಾಗಿ ಪರಿಶೀಲಿಸಬೇಕು ಎಂದು ಗಣೇಶ್ ಅಮೃತ ಒತ್ತಾಯಿಸಿದ್ದಾರೆ. ಅನರ್ಹ ಫಲಾನುಭವಿಗಳನ್ನು ತಕ್ಷಣ ಗುರುತಿಸಿ ಪಿಂಚಣಿ ಸ್ಥಗಿತಗೊಳಿಸುವುದರ ಜೊತೆಗೆ, ಈಗಾಗಲೇ ಪಾವತಿಯಾಗಿರುವ ಹಣದ ಕುರಿತು ಸೂಕ್ತ ತನಿಖೆ ನಡೆಸಬೇಕು. ಸಾರ್ವಜನಿಕ ಹಣದ ಸೋರಿಕೆಗೆ ಕಾರಣವಾಗಿರುವ ಲೋಪಗಳನ್ನು ಸರಿಪಡಿಸಿ ಪಿಂಚಣಿ ಯೋಜನೆಗಳಲ್ಲಿ ಪಾರದರ್ಶಕತೆ ತರಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಅರ್ಹರಿಗೆ ಮಾತ್ರ ಸಾಮಾಜಿಕ ಭದ್ರತಾ ಪಿಂಚಣಿ ಸಿಗುವಂತೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಸಾರ್ವಜನಿಕರ ಹಣದ ದುರ್ಬಳಕೆಗೆ ಅವಕಾಶ ನೀಡಬಾರದು ಎಂದು ಏಖಖ ಜಿಲ್ಲಾ ಅಧ್ಯಕ್ಷ ಗಣೇಶ್ ಅಮೃತ ತಿಳಿಸಿದ್ದಾರೆ.

26.04 ಲಕ್ಷ ಫಲಾನುಭವಿಗಳು ಅನರ್ಹ: KRS ಪಕ್ಷವು ಖಖಖ ಮೂಲಕ ಪಡೆದ ಮಾಹಿತಿಯ ಆಧಾರದಲ್ಲಿ ರಾಜ್ಯದ ಆರು ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳಲ್ಲಿ ಒಟ್ಟು 81,66,558 ಫಲಾನುಭವಿಗಳಿದ್ದು, ಅವರ ಪೈಕಿ 26,04,524 ಮಂದಿ ಅರ್ಹತಾ ಮಾನದಂಡಗಳನ್ನು ಪೂರೈಸದವರಾಗಿದ್ದಾರೆ ಎಂದು ಹೇಳಿದೆ. ಈ ಅನರ್ಹ ಫಲಾನುಭವಿಗಳಿಗೆ ಸರ್ಕಾರದಿಂದ ಪಿಂಚಣಿ ಪಾವತಿಯಾಗುತ್ತಿರುವುದರಿಂದ ರಾಜ್ಯದ ಆರ್ಥಿಕ ಸಂಪನ್ಮೂಲಗಳ ಮೇಲೆ ಹೆಚ್ಚುವರಿ ಹೊರೆ ಬೀಳುತ್ತಿದೆ ಎಂದು ಆರೋಪಿಸಿದೆ. ಅರ್ಹರಲ್ಲದವರನ್ನು ಗುರುತಿಸಿ ಪಿಂಚಣಿ ಸ್ಥಗಿತಗೊಳಿಸುವ ಬದಲು ಸರ್ಕಾರ ನಿರ್ಲಕ್ಷ್ಯ ವಹಿಸುತ್ತಿದೆ. ಇದರಿಂದ ಸಾರ್ವಜನಿಕರ ತೆರಿಗೆ ಹಣ ಪೋಲಾಗುತ್ತಿದ್ದು, ಬಡವರು ಮತ್ತು ನಿಜವಾದ ಅರ್ಹ ಫಲಾನುಭವಿಗಳಿಗೆ ಅನ್ಯಾಯವಾಗುತ್ತಿದೆ ಎಂದು KRS ಆಕ್ಷೇಪಿಸಿದೆ.

ಸರ್ಕಾರಕ್ಕೆ ಹಲವು ಪ್ರಶ್ನೆ: ಸಾಮಾಜಿಕ ಭದ್ರತಾ ಯೋಜನೆಗಳ ಫಲಾನುಭವಿಗಳ ಅರ್ಹತೆಯನ್ನು ನಿಯಮಿತವಾಗಿ ಪರಿಶೀಲಿಸಲಾಗುತ್ತಿದೆಯೇ? ಅನರ್ಹ ಫಲಾನುಭವಿಗಳಿಗೆ ಪಿಂಚಣಿ ಮುಂದುವರಿಯಲು ಕಾರಣವೇನು? ಸರ್ಕಾರದ ಬೊಕ್ಕಸಕ್ಕೆ ಉಂಟಾಗುತ್ತಿರುವ ನಷ್ಟಕ್ಕೆ ಹೊಣೆ ಯಾರು? ಎಂಬ ಪ್ರಶ್ನೆಗಳನ್ನು ಏಖಖ ಮುಂದಿಟ್ಟಿದೆ. ಅಲ್ಲದೆ, ಪಿಂಚಣಿ ಯೋಜನೆಗಳಲ್ಲಿ ಅರ್ಹತೆ ಪರಿಶೀಲನೆಗೆ ಕಟ್ಟುನಿಟ್ಟಿನ ವ್ಯವಸ್ಥೆ ರೂಪಿಸಿ, ಅನರ್ಹ ಫಲಾನುಭವಿಗಳನ್ನು ತಕ್ಷಣ ಕೈಬಿಡಬೇಕು. ಈಗಾಗಲೇ ಪಾವತಿಯಾಗಿರುವ ಹಣದ ಕುರಿತು ಸೂಕ್ತ ತನಿಖೆ ನಡೆಸಿ, ತಪ್ಪಿತಸ್ಥರಿಂದ ಹಣ ವಸೂಲಿ ಮಾಡಬೇಕು

## ಜನರ ಮನೆ ಬಾಗಿಲಿಗೆ ಸರ್ಕಾರ ತಲುಪಿಸುವುದು ಪ್ರಜಾ ಸೇವೆ ಆಂದೋಲನದ ಉದ್ದೇಶ: ಸಚಿವ ಬಸವರಾಜ ರಾಯರಡ್ಡಿ

ಅ.ಶ. ಸುದ್ದಿ ಕುಕನೂರು

ಕುಕನೂರು: ಮಂಗಳೂರು ಗ್ರಾಮದ ಬಾಪೂಜಿ ಡಿ.ಎಡ್ ಕಾಲೇಜ್ ಆವರಣದಲ್ಲಿ ಹಮ್ಮಿಕೊಂಡಿದ್ದ ಸಭೆಯಲ್ಲಿ ಮಾತನಾಡಿದ ಸಚಿಚರು ಸಾರ್ವಜನಿಕರ ಸಮಸ್ಯೆಗಳಿಗೆ ಸ್ಥಳೀಯವಾಗಿಯೇ ಪರಿಹಾರ ಕಲ್ಪಿಸಿ, ಸರ್ಕಾರದ ಯೋಜನೆಗಳ ಸೌಲಭ್ಯಗಳನ್ನು ಜನರ ಮನೆ ಬಾಗಿಲಿಗೆ ತಲುಪಿಸುವ ಉದ್ದೇಶದಿಂದ ಪ್ರತಿ ಶನಿವಾರ ತಾಲೂಕು ಕೇಂದ್ರಗಳಲ್ಲಿ ‘ಪ್ರಜಾ ಸೇವೆ ಆಂದೋಲನ’ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ ಎಂದು ಸಚಿವರು ಹೇಳಿದರು.

ಪ್ರತಿ ತಿಂಗಳ ಮೊದಲ ಮತ್ತು ಎರಡನೇ ಶನಿವಾರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಲಿದ್ದು, ಸಾರ್ವಜನಿಕರ ಅರ್ಜಿಗಳು ಹಾಗೂ ಕುಂದುಕೊರತೆಗಳನ್ನು ಸ್ಥಳದಲ್ಲಿಯೇ ಸ್ವೀಕರಿಸಿ, ಸಾಧ್ಯವಾದಷ್ಟು ಶೀಘ್ರದಲ್ಲಿ ಪರಿಹಾರ ಒದಗಿಸುವ ಮೂಲಕ ಆಡಳಿತದಲ್ಲಿ ಪಾರದರ್ಶಕತೆ



ಹೆಚ್ಚಿಸುವುದು ಸರ್ಕಾರದ ಮಹತ್ವಾಕಾಂಕ್ಷೆಯ ಉದ್ದೇಶವಾಗಿದೆ ಎಂದು ತಿಳಿಸಿದರು. ಮಂಗಳೂರು ಗ್ರಾಮದಲ್ಲಿ ಬಹುದಿನಗಳಿಂದ ಸಾರ್ವಜನಿಕರು ಒತ್ತಾಯಿಸುತ್ತಿದ್ದ ಹಕ್ಕುಪತ್ರ ನೀಡುವ ಪ್ರಕ್ರಿಯೆಗೆ ಸಂಬಂಧಿಸಿದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ಸಚಿವರು ಭರವಸೆ ನೀಡಿದರು.

ಕೌಶಲ್ಯ ಅಭಿವೃದ್ಧಿಗೆ ಸರ್ಕಾರ ಹೆಚ್ಚಿನ ಆದ್ಯತೆ ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವರು, ರಾಜ್ಯದಲ್ಲಿ ಉನ್ನತ ಶಿಕ್ಷಣ ಹಾಗೂ ಕೌಶಲ್ಯ ಅಭಿವೃದ್ಧಿಗೆ ಸರ್ಕಾರ ಹೆಚ್ಚಿನ ಆದ್ಯತೆ ನೀಡುತ್ತಿದೆ. ತಾಂತ್ರಿಕ ಕೌಶಲ್ಯ ಹೊಂದಿರುವ ನಿರುದ್ಯೋಗಿ ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ವಿವಿಧ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ. ಸುಮಾರು 2,000 ನೇಮಕಾತಿಗಳಿಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು. ಬೇವೂರ ಗ್ರಾಮದಲ್ಲಿ ಬಿಸಿಎ ಕಾಲೇಜು ಹಾಗೂ 300 ವಿದ್ಯಾರ್ಥಿಗಳಿಗೆ ವಸತಿ ನಿಲಯ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ. ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆಗೆ ಪೌಷ್ಟಿಕ ಆಹಾರ ಒದಗಿಸುವ ಕಾರ್ಯವೂ ನಡೆಯುತ್ತಿದೆ ಎಂದು ವಿವರಿಸಿದರು.

ರಾಜ್ಯದಲ್ಲಿ ಗೃಹಲಕ್ಷ್ಮಿ ಯೋಜನೆಗೆ ಸಾವಿರಾರು ಕೋಟಿ ರೂ. ಅನುದಾನ ಮೀಸಲಿಡಲಾಗಿದ್ದು, ಅನ್ನಭಾಗ್ಯ ಯೋಜನೆಯ ಮೂಲಕವೂ ಅರ್ಹ ಫಲಾನುಭವಿಗಳಿಗೆ ನೆರವು ನೀಡಲಾಗುತ್ತಿದೆ ಎಂದರು. ತಾಲೂಕಿನಲ್ಲಿ ಸುಮಾರು 40 ಸಾವಿರ ಮಕ್ಕಳಿಗೆ ಶಿಕ್ಷಣದ ಜೊತೆಗೆ ಪೌಷ್ಟಿಕ ಆಹಾರ ಒದಗಿಸಲಾಗುತ್ತಿದೆ. ಸರ್ಕಾರದ ಯೋಜನೆಗಳ ಪ್ರಯೋಜನ ಪ್ರತಿಯೊಬ್ಬ ಅರ್ಹ ಫಲಾನುಭವಿಗೂ ತಲುಪುವಂತೆ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದರು. ಮಂಗಳೂರು ಬಸ್ ನಿಲ್ದಾಣದ ಕಾಮಗಾರಿ ಪೂರ್ಣಗೊಂಡಿದ್ದು, ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಆದ್ಯತೆ ನೀಡಲಾಗುತ್ತಿದೆ. ಪ್ರಜಾ ಸೇವೆಯೇ ಜನಾರ್ದನ ಸೇವೆ ಎಂಬ ಆಶಯದೊಂದಿಗೆ ಜನರ ಸಮಸ್ಯೆಗಳಿಗೆ ಸ್ಪಂದಿಸುವುದು ತಮ್ಮ ಪ್ರಮುಖ ಗುರಿಯಾಗಿದೆ ಎಂದು ಸಚಿವರು ಹೇಳಿದರು. ನಂತರ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ಅರ್ಜಿ ಸ್ವೀಕರಿಸಿ ತ್ವರಿತ ವಿಲೇವಾರಿಗೆ ಕ್ರಮ ಕೈಗೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ. ಸುರೇಶ್ ಬಿ. ಹಿಟ್ನಾಳ, ಸಿಇಒ ವರ್ಣಿತ್ ನೇಗಿ, ಇಒ ಬೆಟದಪ್ಪ, ತಹಶೀಲ್ದಾರರಾದ ಬಸವರಾಜ ಬೆಣ್ಣೆ ಶಿರೂರ, ಬಿಇಓ ಶ್ರೀನಿವಾಸ ಬಿ. ಸಹಾಯಕ ನಿರ್ದೇಶಕ ತಾ.ಪಂ ಕುಕನೂರ ಶರಣಪ್ಪ ಕೆಳಗಿನ ಮನಿ, ತಾಲೂಕು ಮಟ್ಟದ ಅಧಿಕಾರಿಗಳು, ಮಂಗಳೂರು ಹೋಬಳಿ ಅಧ್ಯಕ್ಷರು, ಪಿಡಿಓಗಳು ಹಾಗೂ ಸಾರ್ವಜನಿಕರು ಹಾಜರಿದ್ದರು.

# ವಿಜಯಪುರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘಕ್ಕೆ ವೈಯುಕ್ತಿಕ 5 ಲಕ್ಷ ರೂಪಾಯಿ ನೀಡಿದ ಶಾಸಕ ಶಿವಾನಂದ ಪಾಟೀಲ್

ಅ.ಶ. ಸುದ್ದಿ ವಿಜಯಪುರ

**ವಿಜಯಪುರ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ರಿ) ವಿಜಯಪುರ ಜಿಲ್ಲಾ ಘಟಕದ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ಮಾಜಿ ಸಚಿವ ಹಾಗೂ ಬಸವನಬಾಗೇವಾಡಿ ಶಾಸಕರು ಆದ ಡಿಸಿಸಿ ಬ್ಯಾಂಕಿನ ಅಧ್ಯಕ್ಷ ಶಿವಾನಂದ ಪಾಟೀಲ ಅವರು ವೈಯುಕ್ತಿಕ 5 ಲಕ್ಷ ರೂಪಾಯಿಗಳನ್ನು ನೀಡಿದರು. ಶನಿವಾರ ನಗರದ ಡಿಸಿಸಿ ಬ್ಯಾಂಕ್ ಆವರಣದಲ್ಲಿ ತಮ್ಮನ್ನು ಭೇಟಿಯಾದ ಕಾನಿಪ ಸಂಘ ವಿಜಯಪುರ ಜಿಲ್ಲಾ ಘಟಕದ ಪದಾಧಿಕಾರಿಗಳು ಸಂಘಟನಾ ಕಾರ್ಯದರ್ಶಿಗಳು, ಕಾರ್ಯಕಾರಿಣಿ ಸದಸ್ಯರು ಹಾಗೂ ಸದಸ್ಯರ ಸಮ್ಮುಖದಲ್ಲಿ ಕಾನಿಪ ಜಿಲ್ಲಾಧ್ಯಕ್ಷ ಅಶೋಕ ಯಡಳ್ಳಿ ಅವರಿಗೆ 5 ಲಕ್ಷ ಹಣ ನೀಡಿದರು.**

2025 ರಲ್ಲಿ ನಡೆದಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ವೇಳೆ ಮಾಜಿ ಸಚಿವ ಶಿವಾನಂದ ಪಾಟೀಲರು ಕಾರ್ಯನಿರತ ಪತ್ರಕರ್ತರ ಸಂಘ ವಿಜಯಪುರ ಜಿಲ್ಲಾ ಘಟಕಕ್ಕೆ ವೈಯುಕ್ತಿಕವಾಗಿ 5 ಲಕ್ಷ ರೂಪಾಯಿ ನೀಡುವ ವಾಗ್ದಾನ ಮಾಡಿದ್ದರು. ಈ ಹಿನ್ನಲೆ ಇಂದು ಶಾಸಕ ಶಿವಾನಂದ ಪಾಟೀಲರು ಐದು ಲಕ್ಷ ರೂಪಾಯಿಗಳನ್ನು ಸಂಘದ ಅಭಿವೃದ್ಧಿಗಾಗಿ ನೀಡಿದರು. ಇದೇ ವೇಳೆ ಮಾತನಾಡಿದ ಶಾಸಕ ಶಿವಾನಂದ ಪಾಟೀಲರು ಯಾವಾಗಲೂ ಕಾರ್ಯನಿರತ ಪತ್ರಕರ್ತರ ಸಂಘ ಜೊತೆಗೆ ನಿಲ್ಲುವುದಾಗಿ ಭರವಸೆ ನೀಡಿದರು. ಪತ್ರಕರ್ತರ ಹಿತ ಕಾಪಾಡುವ ಕೆಲಸಗಳನ್ನು ಕಾನಿಪ ಸಂಘ ಮಾಡಿಕೊಂಡು ಹೋಗಲಿ ಎಂದು ಸಲಹೆ ನೀಡಿದರು.



ಈ ವೇಳೆ ಜಿಲ್ಲಾಧ್ಯಕ್ಷ ಅಶೋಕ ಯಡಳ್ಳಿ ಸಂಘದ ಕಾರ್ಯ ಚಟುವಟಿಕೆಗಳ ಕುರಿತು ಶಿವಾನಂದ ಪಾಟೀಲರಿಗೆ ಮಾಹಿತಿ ನೀಡಿದರು. ಕಾನಿಪ ಸಂಘದ ಆವರಣದಲ್ಲಿ ನೂತನ ಬೋರವೆಲ್ ಕೊರೆಸಲಾಗಿದೆ. ಕಟ್ಟಡದ ನವೀಕರಣ ಕಾರ್ಯಗಳನ್ನು ಕೂಡಲೇ ಆರಂಭಿಸಲಾಗುತ್ತದೆ. ಸಂಘಕ್ಕೆ ಯಾವಾಗಲೂ ತಾವು ಸಹಾಯ ಸಹಕಾರ ಮಾಡುತ್ತಲೇ ಬಂದಿದ್ದೀರಿ. ಈ ಹಿಂದೆ 2023 ರಲ್ಲಿ ವಿಜಯಪುರದಲ್ಲಿ ನಡೆದ ರಾಜ್ಯಮಟ್ಟದ 37 ಪತ್ರಕರ್ತರ ಸಮ್ಮೇಳನಕ್ಕೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಪತ್ರಕರ್ತರಿಗೆ ಉತ್ತಮ ಗುಣಮಟ್ಟದ 3000 ಬ್ಯಾಗ್ ನೀಡಿ ಬೆಂಬಲಿಸಿದ್ದೀರಿ.

ರಾಜ್ಯ ಕಾರ್ಯಕಾರಿಣಿ ಸಭೆ ಆಯೋಜಿಸಿದಾಗ ಸಹಾಯ ಮಾಡಿದ್ದೀರಿ. ಈಗ ವೈಯುಕ್ತಿಕವಾಗಿ ಸಂಘಕ್ಕೆ 5 ಲಕ್ಷ ರೂಪಾಯಿ ನೀಡಿದ್ದೀರಿ ಎಂದು ಅಭಿನಂದಿಸಿದರು. ಭವಿಷ್ಯದಲ್ಲಿ ತಮ್ಮ ಸಹಾಯ ಸಹಕಾರ ಸಂಘಕ್ಕಿರಲಿ ಎಂದು ಮನವಿ ಮಾಡಿಕೊಂಡರು. ಹಿರಿಯ ಪತ್ರಕರ್ತರಾದ ಸೀತಾರಾಮ ಕುಲಕರ್ಣಿ, ರಾಜೂ ಕೊಂಡಗೂಳಿ, ಸಂಘಟನಾ ಕಾರ್ಯದರ್ಶಿಗಳಾದ ಮೋಹನ ಕುಲಕರ್ಣಿ, ದೇವೇಂದ್ರ ಹೆಳವರ, ಉಪಾಧ್ಯಕ್ಷ ಶಶಿಕಾಂತ ಮೆಂಡೆಗಾರ, ಸಮೀರ್ ಇನಾಂದಾರ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀನಿವಾಸ ಸೂರಗೊಂಡ, ಗುರು ಗದ್ದನಕೇರಿ, ಪವನ ಕುಲಕರ್ಣಿ, ಸಂಜೀವ ಕುಲಕರ್ಣಿ ಸೇರಿದಂತೆ ಹಲವರು ಹಾಜರಿದ್ದರು.

## ಬ್ರಿಕ್ಸ್ ಸದಸ್ಯತ್ವಕ್ಕೆ ಪಡೆಯಲು ಮೈಪರಚಿಕೊಳ್ಳುತ್ತಿರುವ ಉಗ್ರರ ರಾಷ್ಟ್ರ

ಅ.ಶ. ಸುದ್ದಿ ನವದೆಹಲಿ

**ನವದೆಹಲಿ: ಚೀನಾ ಮತ್ತು ರಷ್ಯಾದ ಪ್ರಬಲ ಬೆಂಬಲವಿದ್ದರೂ ಪಾಕಿಸ್ತಾನಕ್ಕೆ ಇನ್ನೂ ಬ್ರಿಕ್ಸ್ ರಾಷ್ಟ್ರಗಳ ಸದಸ್ಯತ್ವ ಪಡೆಯಲು ಸಾಧ್ಯವಾಗಿಲ್ಲ. ಭಾರತದ ಆತಿಥ್ಯದಲ್ಲಿ ಇಂದಿನಿಂದ 18ನೇ ಬ್ರಿಕ್ಸ್ ಶೃಂಗಸಭೆ ಆರಂಭಗೊಳ್ಳುತ್ತಿದೆ. ಈ ಹೊತ್ತಿನಲ್ಲಿ ಅಚ್ಚರಿಯ ವಿಷಯವೊಂದು ಬೆಳಕಿಗೆ ಬಂದಿದೆ. ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾದಂತಹ ಉದಯೋನ್ಮುಖ ಆರ್ಥಿಕತೆಗಳ ಒಕ್ಕೂಟವಾದ ಬ್ರಿಕ್ಸ್ ಸೇರಲು ಪಾಕಿಸ್ತಾನ ವರ್ಷಗಳ ಹಿಂದೆಯೇ ಅರ್ಜಿ ಸಲ್ಲಿಸಿತ್ತು ಎಂಬುದು ತಿಳಿದುಬಂದಿದೆ.**



ಬ್ರಿಕ್ಸ್ ಒಕ್ಕೂಟವು ಕಳೆದ ವರ್ಷ 'ಬ್ರಿಕ್ಸ್ ಪ್ಲಸ್' ಆಗಿ ವಿಸ್ತರಣೆಗೊಂಡಿತು. ಈಜಿಪ್ಟ್, ಇಥಿಯೋಪಿಯಾ, ಇರಾನ್ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ ರಾಷ್ಟ್ರಗಳನ್ನು ಹೊಸ ಸದಸ್ಯ ರಾಷ್ಟ್ರಗಳನ್ನಾಗಿ ಸೇರಿಸಿಕೊಳ್ಳಲಾಯಿತು. ಹಾಗಾಗಿ ಭಾರತದ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ಕೂಡ ಬ್ರಿಕ್ಸ್ ಸದಸ್ಯತ್ವ ಕೋರಿ ಅರ್ಜಿ ಸಲ್ಲಿಸಿತ್ತು. ಆದರೆ, ಭಾರತದ ವಿರೋಧವು ಪಾಕಿಸ್ತಾನವನ್ನು ಒಕ್ಕೂಟದಿಂದ ಹೊರಗಿಡುವಂತೆ ಮಾಡಿದೆ. ಬ್ರಿಕ್ಸ್ ಸದಸ್ಯತ್ವಕ್ಕಾಗಿ ಅರ್ಜಿ ಸಲ್ಲಿಸಿರುವ ಇತರ 29 ದೇಶಗಳ ಪೈಕಿ ಪಾಕಿಸ್ತಾನವೂ ಒಂದಾಗಿದೆ. ಪ್ರಸ್ತುತ ಎದುರಿಸುತ್ತಿರುವ ಆರ್ಥಿಕ ಸವಾಲುಗಳೇ ಇದಕ್ಕೆ ಕಾರಣ ಎಂದು ಹೇಳಲಾಗುತ್ತಿದೆ. ಸಮೀಕ್ಷೆಗಳ ಪ್ರಕಾರ, ಪಾಕಿಸ್ತಾನದ ಜಿಡಿಪಿ ಬೆಳವಣಿಗೆ ದರವು ಶೇ. 3.70ರಷ್ಟಿತ್ತು. ಹಾಗಾಗಿ ಹಣಕಾಸಿನ ಆಯ್ಕೆಗಳನ್ನು ವೈವಿಧ್ಯಮಯಗೊಳಿಸಲು ಹಾಗೂ ವಿಶ್ವಬ್ಯಾಂಕ್ ಮತ್ತು ಅಂತಾರಾಷ್ಟ್ರೀಯ ಹಣಕಾಸು ನಿಧಿಯ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ಪಾಕ್ ಬ್ರಿಕ್ಸ್ ಸದಸ್ಯತ್ವಕ್ಕೆ ಅರ್ಜಿ ಸಲ್ಲಿಸಿತ್ತು ಎನ್ನಲಾಗಿದೆ. ಅಷ್ಟೇ ಅಲ್ಲದೆ, ಬ್ರಿಕ್ಸ್ ಬೆಂಬಲಿತ ನ್ಯೂ ಡೆವಲಪ್‌ಮೆಂಟ್ ಬ್ಯಾಂಕ್‌ನಲ್ಲಿ 580 ದಶಲಕ್ಷ ಡಾಲರ್ (ಅಂದಾಜು 5,544 ಕೋಟಿ ರೂಪಾಯಿ) ಮೌಲ್ಯದ ಷೇರುಗಳನ್ನೂ ಖರೀದಿಸಿದೆ ಎಂದು ವರದಿಗಳು ತಿಳಿಸಿವೆ. ಬ್ರಿಕ್ಸ್ ಸದಸ್ಯ ರಾಷ್ಟ್ರಗಳಿಗೆ ಭಾರತದ ರಫ್ತು ಶೇ. 48.8ರಷ್ಟು ಹೆಚ್ಚಳ ಗ್ಲೋಬಲ್ ಸೌತ್ (ಜಾಗತಿಕ ದಕ್ಷಿಣದ ರಾಷ್ಟ್ರಗಳು) ಅನ್ನು ಪ್ರತಿನಿಧಿಸುವ ಪ್ರಮುಖ ಗುಂಪಾಗಿ ಬ್ರಿಕ್ಸ್ ಒಕ್ಕೂಟವು ಪಡೆಯುತ್ತಿರುವ ಮನ್ನಣೆ ಹೆಚ್ಚಾಗುತ್ತಿದೆ. ಇದೇ ಸಮಯದಲ್ಲಿ ಪಾಕಿಸ್ತಾನದಿಂದ ಸದಸ್ಯತ್ವಕ್ಕೆ ಅರ್ಜಿಯೂ ಸಲ್ಲಿಕೆಯಾಗಿದೆ. ಸದ್ಯ ಈ ಒಕ್ಕೂಟವು ವಿಶ್ವದ ಜನಸಂಖ್ಯೆಯ ಸುಮಾರು ಶೇ. 49ರಷ್ಟು ಹಾಗೂ ಖರೀದಿ ಸಾಮಥ್ರ್ಯದ ಸಮಾನತೆಯ ಆಧಾರದ ಮೇಲೆ ಜಾಗತಿಕ ಜಿಡಿಪಿಯ ಸುಮಾರು ಶೇ. 40ರಷ್ಟನ್ನು ಪ್ರತಿನಿಧಿಸುತ್ತದೆ. ಬ್ರಿಕ್ಸ್ ಒಕ್ಕೂಟದ ಪ್ರವೇಶಕ್ಕೆ ಚೀನಾ ಮತ್ತು ರಷ್ಯಾದ ಬೆಂಬಲವಿದೆ ಎಂದು ಹೇಳಲಾಗುತ್ತಿದ್ದರೂ, ಪಾಕಿಸ್ತಾನಕ್ಕೆ ಸದಸ್ಯತ್ವ ಇನ್ನೂ ಮರೀಚಿಕೆಯಾಗಿಯೇ ಉಳಿದಿದೆ.

## 'ವಚನಾಮೃತ'

ಕಡು ಖತಿಗೊಂಡ ಮನಕೆ ಹಿತನುಡಿ
ಆಡಲ್ಹೋಗಬೇಡ ಜತನದೊಳ್
ಕಣ್ಗಾವಲಿನೊಳ್ ಕಾಣು!.
ಖತಿ ಇಳಿದ ಮೇಲೊಂದು
ನಲ್ನುಡಿಯ ಹೆಪ್ಪಾಗಿ ಕಡೆದು
ಬೆಣ್ಣೆಯಪ್ಪಿ ತುಪ್ಪವಾಗಿಸೆ ಸತ್ಯವಾಣಿ!!.



ವಾಣಿ ಭಂಡಾರಿ.

# 8,075.56 ಕೋಟಿ ವಹಿವಾಟು, 2.55 ಲಕ್ಷ ರೈತರಿಗೆ ಕೃಷಿ ಸಾಲ

ಅ.ಶ. ಸುದ್ದಿ ವಿಜಯಪುರ

**ವಿಜಯಪುರ: ಜಿಲ್ಲಾ ಕೇಂದ್ರ ಸಹಕಾರಿ (ಡಿಸಿಸಿ) ಬ್ಯಾಂಕ್ 2025–26ನೇ ಸಾಲಿನಲ್ಲಿ ದಾಖಲೆಯ ಸಾಧನೆ ಮಾಡಿದ್ದು, 8,075.56 ಕೋಟಿ ವಹಿವಾಟು ನಡೆಸಿ 29.16 ಕೋಟಿ ನಿವ್ವಳ ಲಾಭ ಗಳಿಸಿದೆ ಎಂದು ಬ್ಯಾಂಕ್ ಅಧ್ಯಕ್ಷ ಹಾಗೂ ಮಾಜಿ ಸಚಿವ ಶಿವಾನಂದ ಎಸ್. ಪಾಟೀಲ ತಿಳಿಸಿದರು.**

ನಗರದ ಕೆ.ಸಿ.ನಗರದಲ್ಲಿರುವ ಡಿಸಿಸಿ ಬ್ಯಾಂಕ್ ಕೇಂದ್ರ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬ್ಯಾಂಕ್ ಇತಿಹಾಸದಲ್ಲಿಯೇ ಇದು ಸಾರ್ವಕಾಲಿಕ ಗರಿಷ್ಠ ನಿವ್ವಳ ಲಾಭವಾಗಿದೆ. ಹಿಂದಿನ ಸಾಲಿನ 7,094.73 ಕೋಟಿ ವಹಿವಾಟಿಗೆ ಹೋಲಿಸಿದರೆ ಪ್ರಸಕ್ತ ಸಾಲಿನಲ್ಲಿ 980.83 ಕೋಟಿ ಹೆಚ್ಚಳವಾಗಿದ್ದು, ಶೇ.13.82ರಷ್ಟು ಬೆಳವಣಿಗೆ ಸಾಧಿಸಲಾಗಿದೆ ಎಂದರು. ಜಿಲ್ಲೆಯ ಸುಮಾರು 2.55 ಲಕ್ಷ ರೈತರಿಗೆ 2,115.09 ಕೋಟಿ ಕೃಷಿ ಸಾಲ ಬಾಕಿ ಇದ್ದು, 2025–26ರಲ್ಲಿ 11,550 ಹೊಸ ರೈತರಿಗೆ 108.02 ಕೋಟಿ ಬೆಳೆ ಸಾಲ ವಿತರಿಸಲಾಗಿದೆ. ಕೃಷಿ ಕ್ಷೇತ್ರಕ್ಕೆ 1,953.43 ಕೋಟಿ ಹಾಗೂ ಕೃಷಿಯೇತರ ಉದ್ದೇಶಗಳಿಗೆ 1,438.20 ಕೋಟಿ ಸೇರಿದಂತೆ ಒಟ್ಟು 3,391.63 ಕೋಟಿ ಸಾಲ ವಿತರಿಸಲಾಗಿದೆ ಎಂದು ಹೇಳಿದರು.



ಬ್ಯಾಂಕಿನ ಒಟ್ಟು ಠೇವಣಿ 4,402.36 ಕೋಟಿಗೆ ಏರಿಕೆಯಾಗಿದ್ದು, ಹಿಂದಿನ ವರ್ಷಕ್ಕೆ ಹೋಲಿಸಿದರೆ 588.20 ಕೋಟಿ ಹೆಚ್ಚಳವಾಗಿದೆ. ದುಡಿಯುವ ಬಂಡವಾಳ 5,599.89 ಕೋಟಿಗೆ ತಲುಪಿದ್ದು, ಸ್ವಂತ ಬಂಡವಾಳ 652.20 ಕೋಟಿಯಾಗಿದೆ. ಬ್ಯಾಂಕ್ 51 ಶಾಖೆಗಳ ಮೂಲಕ ಸೇವೆ ನೀಡುತ್ತಿದ್ದು, 739 ಸಹಕಾರ ಸಂಘಗಳು ಸದಸ್ಯತ್ವ ಹೊಂದಿವೆ. 508 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ, ಬ್ಯಾಂಕಿನ ಒಟ್ಟು ಸಾಲ ಮರುಪಾವತಿ ಪ್ರಮಾಣ ಶೇ.92.61ರಷ್ಟಿದ್ದು, ಕೃಷಿ ಸಾಲ ಮರುಪಾವತಿ ಶೇ.96.26ರಷ್ಟಿದೆ. ಒಟ್ಟು ಎನ್‌ಪಿಎ ಶೇ.4.34ರಷ್ಟಿದ್ದರೂ, ನಿಷ್ಕ್ರಿಯ ಆಸ್ತಿಗೆ ಪೂರ್ಣ ಪ್ರಮಾಣದಲ್ಲಿ ಅನುವು ಕಲ್ಪಿಸಿರುವುದರಿಂದ ನೆಟ್ ಎನ್‌ಪಿಎ ಶೂನ್ಯವಾಗಿದೆ.

2025–26ರ ಶಾಸನಬದ್ಧ ಲೆಕ್ಕಪರಿಶೋಧನೆಯಲ್ಲಿ ಬ್ಯಾಂಕ್ 'ಅ' ವರ್ಗವನ್ನು ಉಳಿಸಿಕೊಂಡಿದೆ ಎಂದು ವಿವರಿಸಿದರು. ಡಿಜಿಟಲ್ ಬ್ಯಾಂಕಿಂಗ್ ಸೇವೆಗಳನ್ನು ವಿಸ್ತರಿಸಲಾಗಿದ್ದು, ಎಟಿಎಂ, ಯುಪಿಐ, ಎನ್‌ಇಎಫ್‌ಟಿ, ಆರ್‌ಟಿಜಿಎಸ್, ಐಎಂಪಿಎಸ್, ಕ್ಯೂಆರ್ ಕೋಡ್, ಎಂ–ಪಿಓಎಸ್ ಹಾಗೂ ಮೈಕ್ರೋ ಎಟಿಎಂ ಸೌಲಭ್ಯಗಳನ್ನು ಒದಗಿಸಲಾಗಿದೆ. ಸ್ವ–ಸಹಾಯ ಗುಂಪುಗಳಿಗೂ ಸಾಲ ಸೌಲಭ್ಯ ಕಲ್ಪಿಸಲಾಗಿದ್ದು, 2025–26ರಲ್ಲಿ 657 ಗುಂಪುಗಳಿಗೆ 23.63 ಕೋಟಿ ಸಾಲ ಜೋಡಣೆಯಾಗಿದೆ ಎಂದರು. ಈ ಸಂದರ್ಭದಲ್ಲಿ ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರು, ಪ್ರಧಾನ ವ್ಯವಸ್ಥಾಪಕರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

# ಶ್ರೀ ಹಾಲಸಿದ್ದೇಶ್ವರ ಮಠದಲ್ಲಿ ವಿಶೇಷ ಪೂಜೆ,ಅನ್ನ ಸಂತರ್ಪಣೆ ಕಾರ್ಯಕ್ರಮ



ಅ.ಶ. ಸುದ್ದಿ ಕನಕಗಿರಿ

**ಕನಕಗಿರಿ ಪಟ್ಟಣದ: ಶ್ರಾವಣ ಮಾಸದ ನಿಮಿತ್ಯ ಶ್ರೀ ಹಾಲಸಿದ್ದೇಶ್ವರ ಮಠದಲ್ಲಿ ವಿಶೇಷ ಪೂಜೆ ಹಾಗೂ ಅನ್ನ ಸಂತರ್ಪಣೆ ಕಾರ್ಯಕ್ರಮವನ್ನು ಭಕ್ತಿಭಾವದಿಂದ ಆಯೋಜಿಸಲಾಯಿತು.**

**ನಂತರ ಮಾತನಾಡಿದ : ಹಾಲಸಿದ್ದೇಶ್ವರ ಮಠದ ಶ್ರೀಗಳು ವೇದಮೂರ್ತಿ ಸೋಮಶೇಖರಯ್ಯ ಸ್ವಾಮಿ ಹಾಲಸಿದ್ದೇಶ್ವರ ಶ್ರೀಗಳು ಹುಟ್ಟಿದ್ದು ಮೂಲ ರಾಂಪುರ ಎಂಬ ಗ್ರಾಮದಲ್ಲಿ ಅದು ಮೈಸೂರು ಪ್ರಾಂತ್ಯದಲ್ಲಿ ಹಿಂದೆ ಬರುತ್ತಿತ್ತು. ಆದರೆ ಈಗ ಶಿವಮೊಗ್ಗದಲ್ಲಿ ಬರುತ್ತದೆ ಎಂದು ತಿಳಿಸಿದರು.**

ಕನಕಗಿರಿಯಲ್ಲಿ ಶ್ರಾವಣ ಮಾಸದ ನಿಮಿತ್ಯ ಒಂದು ತಿಂಗಳ ಕಾಲ ಸ್ವಾಮಿಗೆ ವಿಶೇಷ ಪೂಜೆ ಪಂಚಾಮೃತ ಅಭಿಷೇಕ, ಬಿಲ್ವಪತ್ರೆ ಅರ್ಚನೆ, ಕುಂಕುಮಾರ್ಚನೆ, ಪುಷ್ಪಾಲಂಕಾರ, ನೇರ ಮೀಸಲಾಗುತ್ತದೆ. ಶ್ರಾವಣ ಕೊನೆಯ ದಿನದಂದು ಸಿಹಿ ಮತ್ತು ಅನ್ನ ಸಂತರ್ಪಣೆ ಕಾರ್ಯಕ್ರಮ ಆಯೋಜಿಸಲಾಗುತ್ತದೆ. ಹಾಲ ಸಿದ್ದೇಶ್ವರ ಮಠ ಗದ್ದಿಗೆ ಸರಿ ಸುಮಾರು 900 ವರ್ಷ ಇತಿಹಾಸ ಮಠವಾಗಿದೆ ಎಂದು ಹೇಳಿದರು. ಆಲಸಿದ್ದೇಶ್ವರ ಶ್ರೀಗಳ ಮೂಲ ಕರ್ತೃ ಗದ್ದಿಗೆಇರುವುದು ಕನಕಗಿರಿಯಲ್ಲಿ ಇದ್ದು, ಮೂರು ಜೀವಂತ ಸಮಾಧಿಗಳಲ್ಲಿ ಇದು ಕೂಡ ಒಂದಾಗಿದ್ದು, ಚಿದಾನಂದ ಅವಧೂತರ ಗದ್ದೆಗೆ ಹಾಗೂ ಸುವರ್ಣಗಿರಿ ವಿರಕ್ತ ಮಠ ದಲ್ಲಿರುವ ಗದ್ದಿಗೆಗಳಾಗಿವೆ.

ಅಪಾರ ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿ ದೇವರ ದರ್ಶನ ಪಡೆದು ಪ್ರಸಾದ ಸ್ವೀಕರಿಸಿದರು. ಹಾಲೇಶ್ವರನ ಮಠದ ಸುದ್ದಿಯಲ್ಲಿ ಈ ಸಂದರ್ಭದಲ್ಲಿ ಚಂದ್ರಶೇಖರ್ ಹಡಪದ, ಶಿವಪ್ಪ ಬಾವಿಕಟ್ಟಿ, ಸಂಗಪ್ಪ ತಗ್ಗಿನಮನಿ, ಚೆನ್ನಯ್ಯ ಸ್ವಾಮಿ, ಮೈಲಾಪುರ ಹಿರೇಮಠ, ಶೇಖರಪ್ಪ ಬಾವಿಕಟ್ಟಿ, ಮಂಜುನಾಥ್ ರೆಡ್ಡಿ ಮಾದಿನಾಳ, ಶೈ ಲಾನ್ ಬಾಷಾ ಎಲೆಗಾರ, ವಿಜಯ ಭಾಸ್ಕರ್,ಕಾದ್ರ ಭಾಷಾ, ವೀರೇಶ್ ದೇವಲಾಪುರ ಮಠ, ಈಶ್ವರಯ್ಯ ಟಿಎಂ, ವಿಶ್ವನಾಥ್ ಎಂ ಹೆಚ್, ಸೇರಿದಂತೆ ನೂರಾರು ಪ್ರಮುಖರು ಹಾಗೂ ಭಕ್ತಾದಿಗಳು ಸಾರ್ವಜನಿಕರು ಭಾಗವಹಿಸಿ ಸ್ವಾಮಿಯ ಕೃಪೆಗೆ ಪಾತ್ರರಾದರು

# ಕಳೆದ 3 ವರ್ಷದಲ್ಲಿ ಬೆಂಗಳೂರಿನಲ್ಲಿ 14,042 ಹಳೆಯ ವಾಹನಗಳು ಗುಜರಿಗೆ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ನಗರದಲ್ಲಿ ಹೆಚ್ಚುತ್ತಿರುವ ಹಳೆಯ ವಾಹನಗಳಿಂದ ಉಂಟಾಗುತ್ತಿರುವ ವಾಯುಮಾಲಿನ್ಯ ನಿಯಂತ್ರಿಸುವ ಉದ್ದೇಶದಿಂದ ರಾಜ್ಯ ಸಾರಿಗೆ ಇಲಾಖೆ ಜಾರಿಗೆ ತಂದಿರುವ ವಾಹನ ಗುಜರಿ ನೀತಿಯಡಿ ಕಳೆದ ಮೂರು ವರ್ಷಗಳಲ್ಲಿ 14,042 ಹಳೆಯ ವಾಹನಗಳನ್ನು ಗುಜರಿಗೆ ಹಾಕಲಾಗಿದೆ.**

ಕಳೆದ 2022ರ ಡಿಸೆಂಬರ್‌ನಲ್ಲಿ ಕೇಂದ್ರದ ಸೂಚೆಯಂತೆ ರಾಜ್ಯದಲ್ಲಿ ವಾಹನ ಗುಜರಿ ನೀತಿ ಜಾರಿಗೆ ಬಂದಿದ್ದು, 2023ರ ಸೆ. 1ರಿಂದ 2026ರ ಜು.31ರವರೆಗೆ ನೋಂದಾಯಿತ ವಾಹನ ಸ್ಕ್ರ್ಯಾಪಿಂಗ್ ಕೇಂದ್ರಗಳ ಮೂಲಕ ಒಟ್ಟು 14,042 ವಾಹನಗಳನ್ನು ಗುಜರಿಗೆ ಹಾಕಲಾಗಿದೆ. ಇದರಲ್ಲಿ 9,976 ಖಾಸಗಿ ಹಾಗೂ 3,390 ಸರ್ಕಾರಿ ಹಳೆಯ ವಾಹನಗಳು ಸೇರಿವೆ. ರಾಜ್ಯದಲ್ಲಿ 15 ವರ್ಷಕ್ಕಿಂತ ಹಳೆಯದಾದ ಸರ್ಕಾರಿ ವಾಹನಗಳನ್ನು ಗುಜರಿಗೆ ಹಾಕುವ ವ್ಯವಸ್ಥೆ ಜಾರಿಯಲ್ಲಿದೆ. ಅಲ್ಲದೆ, ವಾಹನ ಮಾಲೀಕರು ತಮ್ಮ ಹಳೆಯ ವಾಹನಗಳನ್ನು ಸ್ವಯಂಪ್ರೇರಿತವಾಗಿ ಸ್ಕ್ರ್ಯಾಪ್ ಮಾಡಿಸಿಕೊಳ್ಳಲು ಅವಕಾಶವಿದೆ.



ಹಳೆಯ ವಾಹನವನ್ನು ಗುಜರಿಗೆ ಹಾಕಿ ಹೊಸ ವಾಹನ ಖರೀದಿಸುವವರಿಗೆ ಸಾರಿಗೆ ಇಲಾಖೆ ತೆರಿಗೆ ವಿನಾಯಿತಿ ನೀಡುತ್ತಿದೆ. ದ್ವಿಚಕ್ರ ವಾಹನಗಳನ್ನು ಸ್ಕ್ರ್ಯಾಪ್ ಮಾಡಿದರೆ 1,000ರಿಂದ 5,000ರವರೆಗೆ ಹಾಗೂ ನಾಲ್ಕು ಚಕ್ರದ ವಾಹನಗಳಿಗೆ 10,000ರಿಂದ 50,000ರವರೆಗೆ ತೆರಿಗೆ ವಿನಾಯಿತಿ ದೊರೆಯಲಿದೆ. ಬಳಕೆಯ ಅವಧಿ ಮುಗಿದ ವಾಹನಗಳನ್ನು ಸ್ವಯಂಪ್ರೇರಿತವಾಗಿ ಗುಜರಿಗೆ ಹಾಕಲು ಪ್ರೋತಾಹಿಸುವುದು ಹಾಗೂ ಅವುಗಳ ವಿವಿಧ ಭಾಗಗಳು ಮತ್ತು ಲೋಹಗಳನ್ನು ವೈಜ್ಞಾನಿಕವಾಗಿ ಮರುಬಳಕೆ ಮಾಡುವ ವ್ಯವಸ್ಥೆ ರೂಪಿಸುವುದು ನೀತಿಯ ಪ್ರಮುಖ ಉದ್ದೇಶವಾಗಿದೆ. ಇದರಿಂದ ಹಳೆಯ ವಾಹನಗಳ ಸಂಖ್ಯೆಯನ್ನು ಕಡಿಮೆ ಮಾಡುವುದರ ಜೊತೆಗೆ ಪರಿಸರ ಸಂರಕ್ಷಣೆಗೆ ಸಹಕಾರಿಯಾಗಲಿದೆ.

ಇದೇ ವೇಳೆ, ವಾಹನ ಮಾಲೀಕರು ದೆಹಲಿ ಮಾದರಿಯಲ್ಲಿ 15 ಮತ್ತು 20 ವರ್ಷಕ್ಕಿಂತ ಹಳೆಯ ವಾಹನಗಳನ್ನು ಕಡ್ಡಾಯವಾಗಿ ಗುಜರಿಗೆ ಹಾಕುವ ನಿಯಮವನ್ನು ರಾಜ್ಯದಲ್ಲೂ ಜಾರಿಗೆ ತರಬೇಕು ಎಂಬ ಒತ್ತಾಯ ಕೇಳಿಬಂದಿದೆ.

# ಜನರಿದ್ದಲ್ಲೇ ಪ್ರಜಾಸೇವೆ ತ್ವರಿತ ಪರಿಹಾರ ಯಶವಂತರಾಯಗೌಡರು

ಅ.ಶ. ಸುದ್ದಿ ಇಂಡಿ

**ಇಂಡಿ: ಸರಕಾರದ ಸೇವೆಯನ್ನು ಜನರ ಮನೆ ಬಾಗಲಿಗೆ ತಲುಪಿಸುವ ಜನರು ಇದ್ದಲ್ಲಿಗೆ ಆಡಳಿತ ಯಂತ್ರವನ್ನು ಕಳುಹಿಸಿ ಅವರ ಕುಂದುಕೊರತೆ ಮತ್ತು ಮನವಿ ಪತ್ರಗಳನ್ನು ಸ್ವೀಕರಿಸಿ ನಿಗದಿತ ಸಮಯದಲ್ಲಿ ಪರಿಹಾರ ಒದಗಿಸಲು ಅಧಿಕಾರಿಗಳಿಗೆ ಕಟ್ಟುನಿಟ್ಟಾಗಿ ಸೂಚನೆ ನೀಡಲಾಗಿದೆ ಎಂದು ಶಾಸಕ ಯಶವಂತರಾಯಗೌಡ ಪಾಟೀಲರು ಹೇಳಿದರು.**

ತಾಲೂಕಿನ ಅಥರ್ಗಾ ಗ್ರಾಮದಲ್ಲಿ ತಾಲೂಕಾ ಆಡಳಿತ ಮತ್ತು ತಾ.ಪಂ ಇಂಡಿ ಇವರ ಸಹಯೋಗದಲ್ಲಿ ಹಮ್ಮಿಕೊಂಡ ಪ್ರಜಾಸೇವಾ ಅಂದೋಲನ ಕಾರ್ಯಕ್ರಮದಲ್ಲಿ ಮಾತನಾಡಿದರು. ಪ್ರಜೆಗಳ ಸೇವೆಯೇ ಸರಕಾರದ ಮೊದಲ ಕರ್ತವ್ಯ. ಜನರು ಅರ್ಜಿ ಹಿಡಿದು ಕಚೇರಿಗಳಿಗೆ ಅಲೆಯಬಾರದು, ಸರಕಾರವೇ ಮನೆ ಬಾಗಲಿಗೆ ಹೋಗಿ ಕುಂದುಕೊರತೆ ಆಲಿಸಿ ಪರಿಹರಿಸುತ್ತದೆ ಎಂದರು.



ಕಂದಾಯ ಉಪವಿಬಾಗಾಧಿಕಾರಿ ಚಿದಾನಂದ ಗುರುಸ್ವಾಮಿಯವರು ಮಾತನಾಡಿ ಸರಕಾರಿ ಸೇವೆಯಲ್ಲಿ ಪಾರದರ್ಶಕತೆ ಮತ್ತು ಜವಾಬ್ದಾರಿಯುತ ಪರಂಪರೆಯನ್ನು ಮುಂದುವರೆಸಿ ಸಾರ್ವಜನಿಕ ಸೇವೆಗೆ ವೇಗ ಮತ್ತು ಭ್ರಷ್ಟಾಚಾರಮುಕ್ತ ಮಾಡುವ ದೃಡ ಸಂಕಲ್ಪವನ್ನು ಸರಕಾರ ಹೊಂದಿದೆ ಎಂದರು.

ತಹಸೀಲ್ದಾರ ನಾಗೇಂದ್ರ ಕೋಳಶೆಟ್ಟಿ ಮಾತನಾಡಿ ಸಾಕಷ್ಟು ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ನೀಡಲಾಗುತ್ತಿದೆ. ಉಳಿದ ಅರ್ಜಿಗಳನ್ನು ತಾಲೂಕಾ ಜಿಲ್ಲಾ ಮಟ್ಟಕ್ಕೆ ವರ್ಗಾವಣೆ ಮಾಡಿ ಪರಿಹಾರ ನೀಡುವ ಪ್ರಯತ್ನ ಈ ಯೋಜನೆಯದಾಗಿದೆ ಎಂದರು. ಇಓ ಮಹಾದೇವಪ್ಪ ಏವೂರ, ಬಸವರಾಜ ಗೊರನಾಳ ಮಾತನಾಡಿದರು. ವೇದಿಕೆಯ ಮೇಲೆ ಭೂ ಸ್ವಾಧೀನ ವಿಶೇಷಧಿಕಾರಿ ಜಿ. ಎಸ್.ಹಿರೇಮಠ, ಸಿಪಿಐ ಸುನೀಲ ಪಾಟೀಲ,ಭೀಮಣ್ಣ ಕವಲಗಿ, ಅಥರ್ಗಾ ಗ್ರಾ.ಪಂ ಮಾಜಿ ಅಧ್ಯಕ್ಷ ಗೀರೀಶ ಚಾಂದಕವಠೆ,ಬಿ.ಸಿ.ಸಾಹುಕಾರ ಮತ್ತಿತರಿದ್ದರು. ಪಂಡಿತ ಕೊಡಹೊನ್ನ, ಎಚ್.ಎಚ್. ಗುನ್ನಾಪುರ, ಲೋಕೋಪಯೋಗಿ ಇಲಾಖೆಯ ದಯಾನಂದ ಮಠ, ಹೆಸ್ಕಾಂನ ಎಸ್.ಎ.ಬಿರಾದಾರ, ಎಸ್. ಆರ್ ಮೆಂಡೆಗಾರ, ಸತೀಶ ಬಡಿಗೇರ ಸೇರಿದಂತೆ ತಾಲೂಕಿನ ಎಲ್ಲ ಅಧಿಕಾರಿಗಳು ಪಾಲ್ಗೊಂಡಿದ್ದರು.

ಕಾರ್ಯಕ್ರಮದಲ್ಲಿ ಪ್ರಕಾಶ ಬಿರಾದಾರ ಅಥರ್ಗಾದ ಐದು ಬಾಂದಾರಗಳಿಗೆ ನೀರು ಬಿಡುವ ಕುರಿತು, ರೇಣುಕಾ ಹುನ್ನೂರ ಮಹೇಶ ಮೋಸಲಗಿ ಗ್ರಾಮದ ಒಳ ಚರಂಡಿ ಕುರಿತು, ಬಿ.ಸಿ.ಸಾವಕಾರ ಬಸನಾಳ ಗ್ರಾಮಕ್ಕೆ ಬಸ್ಸು ನಿಲ್ಲಿಸುವ ಕುರಿತು, ಪರಶುರಾಮ ಬಗಲಿ ರೈತರಿಗೆ ಹಗಲು ವಿದ್ಯುತ್ ನೀಡುವ ಕುರಿತು, ಗುರಲಿಂಗಪ್ಪ ಹಿಟ್ನಳ್ಳಿ ವಸತಿ ಪ್ರದೇಶಗಳಿಗೆ ಶುದ್ದ ಕುಡಿಯುವ ನೀರಿನ ಪೂರೈಕೆ ಕುರಿತು, ಸುಶೀಲಾಬಾಯಿ ರಾಠೋಡ ವಸತಿ ಯೋಜನೆ ಕುರಿತು, ಪ್ರಕಾಶ ನಾಯ್ ತಾಂಡಾ ಜನರ ಹಕ್ಕು ಪತ್ರ ವಿತರಣೆ ಕುರಿತು ಸೇರಿದಂತೆ ಅನೇಕ ಪ್ರಶ್ನೆಗಳಿಗೆ ಸ್ಥಳದಲ್ಲಿಯೇ ಪರಿಹಾರ ನೀಡಿದರು. ಅಂಗವಿಕಲರಿಗೆ ಮಾಶಾಸನ, ಗೃಹಲಕ್ಷ್ಮೀ ಯೋಜನೆ ಮತ್ತು ವೃದ್ಧಾಪ ವೇತನ ಸುಮಾರು 40 ಜನರಿಗೆ ಮಂಜುರಾತಿ ನೀಡಿದರು.

# ನಮ್ಮವರಂತಲ್ಲದ ನಮ್ಮವರನ್ನು ಮರೆಯುವುದು ಹೇಗೆ?



ಮನುಷ್ಯ ಬದುಕಿನ ಸಂಬಂಧಗಳು ನೇಕಾರ ನೂಲಿನಿಂದ ನೇಯ್ದ ಬಟ್ಟೆಯಂತೆ ಎಂದೆಂದಬಹುದು. ಕೆಲವು ನೂಲಗಳು ಹೇಗೆ ನೇಕಾರನ ಮಗ್ಗದಿಂದ ಬಂದಿರುತ್ತದೆಯೋ, ಹಾಗೆಯೇ ಕೆಲವು ಸಂಬಂಧಗಳು ಜನ್ಮದಿನದಲ್ಲೇ ಜೊತೆಯಾಗಿ ಬಂದಿರುತ್ತವೆ. ಆ ಬಟ್ಟೆಯ ನೇಯ್ಗೆ ಮುಗಿದ ನಂತರ ಕೆಲವೊಂದಿಷ್ಟು ಮೇಲು ಅಲಂಕಾರವನ್ನು ಮಾಡಿರುತ್ತಾರೆ ಅಲ್ಲವೇ? ಹಾಗೆಯೇ ಕೆಲವು ಸಂಬಂಧಗಳು ಬದುಕಿನ ದಾರಿಯಲ್ಲಿ ತಾವಾಗಿಯೇ ಹೆಣೆದುಕೊಳ್ಳುತ್ತೇವೆ. ವಿಚಿತ್ರವೆಂದರೆ ನೇಕಾರನ ಮಗ್ಗದಿಂದ ಬಂದ ನೂಲಿಗಿಂತ ಮೇಲೆ ಹಾಕಿದ ಅಲಂಕಾರವೇ ಹೆಚ್ಚು ಇಷ್ಟವಾಗುವಂತೆ ಬದುಕಿನ ದಾರಿಯಲ್ಲಿ ಬೆರತ ಸಂಬಂಧಗಳೆ ಹೆಚ್ಚೆಚ್ಚು ಹೃದಯಕ್ಕೆ ಹತ್ತಿರವಾಗಿ ನಿಲ್ಲುತ್ತವೆ. ಅವರು ನಮ್ಮವರಲ್ಲದಿದ್ದರೂ ನಮ್ಮವ-ರಿಗಿಂತ ಹೆಚ್ಚಾಗಿ ನಮ್ಮವರಾಗಿ ಬಿಡುತ್ತಾರೆ.

ಹಾಗಾದರೆ ಈ ಸಂಬಂಧವೆಂದರೇನು? ಎರಡು ಮನಸ್ಸುಗಳು ಒಂದೇ ದಿಕ್ಕಿನಲ್ಲಿ ಸಾಗುವದು ಎಂದರ್ಥ. ಆದರೆ ಎಲ್ಲ ಸಂಬಂಧಗಳು, ಎಲ್ಲ ಮನಸ್ಸುಗಳು ಹಾಗೆ ಇರುವದಿಲ್ಲ. ಕೆಲವು ಸಂಬಂಧಗಳು ಬದುಕಿಗೆ ವಸಂತ ಕಾಲದಂತೆ ಬಂದು ಶರತ್ಕಾಲದಲ್ಲಿ ಎಲೆಗಳು ಉದುರಿದಂತೆ ಉದುರಿ ಗಾಳಿಯಲ್ಲಿ ಹಾರಿ ಹೋಗುತ್ತಾವೆ. ಆಗ ವಸಂತ ಕಾಲದಲ್ಲಿ ಕೋಗಿಲೆ ಹಾಡಿದಂತೆ ಹಾಡಿ ನಲಿಯುತ್ತಿದ್ದ ಮನಸ್ಸಿಗೆ ಘಾಸಿಯಾಗಿ ಅವರನ್ನು ಮರೆಯುವದು ಹೇಗೆ? ಎಂಬ ಪ್ರಶ್ನೆ ಬೃಹದಾಕಾರವಾಗಿ ಬೆಳೆದು ಮನಸ್ಸಿನಲ್ಲಿ ಸದಾ ಕೊರೆಯ ತೊಡಗುತ್ತದೆ. ಆಗ ನಮ್ಮ ಬದುಕನ್ನು ಮತ್ತೆ ವಸಂತಕ್ಕೆ ತರಬೇಕಾದರೆ ನಾವುಗಳು ನಾವೇ ಪ್ರಶ್ನೆ ಹಾಕಿಕೊಳ್ಳಬೇಕು. ಮರೆಯುವುದು ಏನನ್ನು, ಯಾರನ್ನು, ಸಂಬಂಧವನ್ನನ್ನಾ ಅಥವಾ ಅವರ ಬಗ್ಗೆ ನಾವು ಕಟ್ಟಿಕೊಂಡ ನಮ್ಮವರೆಂಬ ಭ್ರಮೆಯನ್ನೊ.

ನಾವು ಪ್ರೀತಿಸುವುದು ಏನನ್ನು ಎಂಬ ಪ್ರಶ್ನೆ ಇಲ್ಲಿ ಏಳದೇ ಇರಲಾರದು. ವ್ಯಕ್ತಿಯ ಮನಸ್ಸನ್ನೊ, ಅವರ ದೇಹವನ್ನೊ ಅಥವಾ ಅವರು ನಮಗೆ ಕೊಡುತ್ತಿರುವ ಕಾಣಿಕೆ ಎಂಬ ಸಂತೋಷವನ್ನೊ ಎಂಬುವುದನ್ನು ನಾವಿಲ್ಲಿ ಅರಿಯಬೇಕು. ನಾವು ಆ ವ್ಯಕ್ತಿಯ ಬಗ್ಗೆ ಒಂದು ಸುಂದರವಾದ ಕಲ್ಪನಾ ಲೋಕದ ಕನಸ್ಸನ್ನು ಕಟ್ಟಿಕೊಂಡಿರುತ್ತೇವೆ ಅಲ್ಲವೇ! ಆ ಕನಸು ಒಡೆದು ಹೋದರೆ ನಾವು ಅವರ ಮೇಲೆ ಇಟ್ಟುಕೊಂಡ ಪ್ರೀತಿ ವಿಶ್ವಾಸ, ನಂಬಿಕೆ ಒಡೆದು ಚೂರು ಚೂರು ಮಾಡಿಕೊಂಡು ಬಿಡುತ್ತೇವೆ. ಆಗ ಆ ವ್ಯಕ್ತಿಯ ಎಲ್ಲ ಗುಣಗಳು ಗಣನೆಗೆ ಬರದೆ ಅವನಿಗೆ ವಿದಾಯ ಹೇಳಲು ಪ್ರಾರಂಭಿಸಿ ಬಿಡುತ್ತೇವೆ. ಅವನಿಗೆ ನೋವು ಕೊಡಲು ಪ್ರಾರಂಭಿಸುತ್ತೇವೆ. ಹೇಗೆ ನಾವು ಒಂದು ಬೊಗಸೆ ನೀರನ್ನು ಕೈಯಲ್ಲಿ ಹಿಡಿದಾಗ ಅದನ್ನು ಗಟ್ಟಿಯಾಗಿ ಹಿಡಿದರು ಅದು ಜಾರಿ ಹೋಗುತ್ತದೆ ಅಲ್ಲವೇ. ಹಾಗೆಯೇ ಕೆಲ ಸಂಬಂಧಗಳು ನಾವು ಎಷ್ಟೇ ಜಾಗರೂಕತೆಯಿಂದ ಹಿಡಿದುಕೊಂಡು ನಡೆದರೂ ಉಳಿಯಬೇಕಾದದ್ದು ಉಳಿಯುತ್ತದೆ, ಹೋಗಬೇಕಾದದ್ದು ಹೋಗುತ್ತದೆ.

ಪ್ರಕೃತಿಯೇ ನಮ್ಮ ಬದುಕಿಗೆ ಪಾಠವಾಗಿ ನಿಲ್ಲುತ್ತದೆ ಎಂಬುದನ್ನು ನಾವು ಗಮನಿಸಬೇಕಾಗುತ್ತದೆ. ಮರ ಗಿಡಗಳು ಪ್ರತಿ ವರ್ಷವೂ ಸಾವಿರಾರು ಎಲೆಗಳನ್ನು ಕಳೆದುಕೊಳ್ಳುತ್ತವೆ. ಆದರೆ ಅದು ನೋವು ಪಡುವುದಿಲ್ಲ. ಚಿಗುರುದ ಜಾಗದಲ್ಲಿಯೇ ಹೊಸ ಚಿಗುರನ್ನು ಬರುತ್ತದೆ. ಎಂಬ ಸತ್ಯ ಆ ಮರ ತಿಳಿದಿರುತ್ತದೆ. ಹಾಗೆಯೇ ಮನುಷ್ಯನು ಕೂಡಾ ಹೊಸ ವಸಂತಕ್ಕಾಗಿ ಉದುರಿದ ಎಲೆಗಳನ್ನು ಮರೆಯಬೇಕಾಗುತ್ತದೆ. ನಾವು ಅವನಿಗಿಂತ ಅವನ ಭಾವನೆಗಳನ್ನು ಹೆಚ್ಚು ಪ್ರೀತಿಸುವದರಿಂದ ಈ ನೋವು ಜಾಸ್ತಿ ಹಾಗಾಗಿ ಮರೆಯುವುದು ಕಷ್ಟವಾಗುತ್ತದೆ. ಆದರೆ ಒಂದನ್ನು ಮಾತ್ರ ನೆನಪಿಡಬೇಕು ಕಾಲ ಯಾವುದನ್ನು, ಯಾರನ್ನು, ಯಾವ ವ್ಯಕ್ತಿಯನ್ನು ಮರೆಸುವುದಿಲ್ಲ. ಕೇವಲ ಮರೆ ಮಾಚಿರುತ್ತದೆ. ತಾಳ್ಮೆ ಇಲ್ಲಿ ಮನುಷ್ಯನಿಗೆ ಮುಖ್ಯವಾಗುತ್ತದೆ. ಸಂಬಂಧಗಳನ್ನು ಯಾವಾಗ ಇದು ನನ್ನದು ಎಂಬ ಹಕ್ಕು ಸ್ಥಾಪಿಸುತ್ತಾನೋ ಆಗ ಆ ಹಕ್ಕು ಒಡೆದು ಹೋದಾಗ ದುಃಖ ತನ್ನಿಂದ ತಾನೇ ಹುಟ್ಟಿಕೊಳ್ಳುತ್ತದೆ.

ಭಗವಾನ್ ಬುದ್ಧನ ಮಾತನ್ನು ನಾವು ಇಲ್ಲೇ ನೆನಪಿಸಿಕೊಳ್ಳಲೇಬೇಕು. "ದುಃಖದ ಮೂಲ ಆಸೆ ಮತ್ತು ಆ ಆಸೆಗೆ ನಮ್ಮನ್ನು ನಾವು ಅಂಟಿಸಿಕೊಳ್ಳುವುದು". ಯಾವಾಗ ನಾವು ವ್ಯಕ್ತಿಯ ಮೇಲೆ ಮೋಹ, ಆಸೆ, ಅಂಟಿ-ಕೊಳ್ಳುವಿಕೆ ಕಡಿಮೆಯಾಗುತ್ತದೆಯೋ ಆವಾಗ ದುಃಖ ತಾನಾಗಿಯೇ ಕಡಿಮೆಯಾಗಿ ಮೈ ಮನಸ್ಸು ಹಗುರಗೊಳ್ಳಲು ಪ್ರಾರಂಭಿಸುತ್ತದೆ. "ವ್ಯಕ್ತಿ ವ್ಯಕ್ತಿಯನ್ನು ಪ್ರೀತಿಸಬೇಕು" ಆದರೆ ಆ ಪ್ರೀತಿಗೆ ಬಂಧನ ಹಾಕಬಾರದು. ಅದನ್ನು ಸ್ವಚ್ಛಂದವಾಗಿ ಆಕಾಶದಲ್ಲಿ ಹಾರಾಡುವ ಹಕ್ಕಿಯಂತೆ ಹರಿ ಬಿಡಬೇಕು ಹೊರತು ಪಂಜರದಲ್ಲಿ ಬಂಧಿಸಿಡಬಾರದು.

ಯಾವುದೇ ವ್ಯಕ್ತಿಯನ್ನು ಮರೆಯುವುದು ಎಂದರೆ ಆ ವ್ಯಕ್ತಿ ಮತ್ತು ಆ ವ್ಯಕ್ತಿಯ ನೆನಪುಗಳನ್ನು ಅಳಿಸಿ ಹಾಕುವುದಲ್ಲ. ಅವುಗಳನ್ನು ನಮ್ಮ ಬದುಕಿಗೆ ಕಲಿಸಿದ ಪಾಠಗಳಾಗಿ ನಿಲ್ಲಿಸಿಕೊಳ್ಳಬೇಕು. ನಾವು ಮನುಷ್ಯ ಸಂಬಂಧಗಳನ್ನು ಒಂದು ಸುಂದರ ಬದುಕು ಎಂಬ ಪುಸ್ತಕ ಕ್ಕೆ ಹೋಲಿಸಿಕೊಂಡಾಗ ಬದುಕಿನ ಅರ್ಥ ನಮಗಾಗುತ್ತದೆ. ಕೆಲವರು ನಮ್ಮ ಬದುಕಿಗೆ ಒಂದು ಪುಟದಂತೆ ಕಂಡರೆ, ಇನ್ನೂ ಕೆಲವರು ಒಂದು ಅಧ್ಯಾಯದಂತೆ ಕಾಣುತ್ತಾರೆ, ಮತ್ತೆ ಕೆಲವರು ಒಂದು ಸಂಪೂರ್ಣ ಗ್ರಂಥ ಎದ್ದಂತೆ ಅಲ್ಲವೇ. ಯಾರು ಶಾಶ್ವತವಲ್ಲ ಬದುಕು ಎಂಬ ಪಯಣದಲ್ಲಿ ಕೆಲವರು ನಾಲ್ಕು ಹೆಜ್ಜೆ ಜೊತೆ ಹಾಕ ಬಹುದು. ಕೆಲವರು ಕೆಲ ದೂರ ಪಯಣಿಸಬಹುದು, ಕೆಲವರು ನಮ್ಮ ಕೊನೆಯವರೆಗೂ ಜೊತೆಯಾಗಿಯೇ ನಿಲ್ಲಬಹುದು. ಇಂತಹ ಪಯಣದಲ್ಲಿ ಯಾರನ್ನು ದೋಷಿಸದೆ ಅವರು, ಅವರ ಜೊತೆಯಾದ ಸಮಯ ನಿನ್ನದೆಂದು ಕೃತಜ್ಞತೆ ಹೇಳಿಬಿಡಬೇಕು. ಏಕೆಂದರೆ ಪ್ರತಿಯೊಂದು ಬೀಳ್ಕೊಡುಗೆ ಮತ್ತೊಂದು ಸಂಬಂಧದ ಪ್ರಾರಂಭವಾಗಿರುತ್ತದೆ.

ಕೆಲವೊಂದಿಷ್ಟು ಸುಂದರ ಹವ್ಯಾಸಗಳನ್ನು ಅಳವಡಿಸಿಕೊಳ್ಳುವುದು ಅವಶ್ಯವಾಗಿರುತ್ತದೆ. ನಮ್ಮನ್ನು ನಾವು ಮೊದಲು ಪ್ರೀತಿಸುವದನ್ನು ಕಲಿಯಬೇಕು. ನಮ್ಮ ಸಂತೋಷದ ಕೀಲಿ ನಮ್ಮ ಹತ್ತಿರವೇ ಇಟ್ಟುಕೊಳ್ಳಬೇಕೇ ಹೊರತು ಇನ್ನೊಬ್ಬರಿಗೆ ನೀಡದಂತೆ ಇರಬೇಕು. ನೊಂದು, ಬೆಂದು, ಕಾಲಿಯಂತಿರುವ ಮನುಷ್ಯನು ಸಾಹಿತ್ಯ, ಸಂಗೀತ, ಸಾಮಾಜಿಕ ಚಿಂತನೆ, ಸರಳ ಸೂಕ್ತ ವ್ಯಾಯಾಮ, ವಾಯು ವಿಹಾರ, ಪ್ರಕೃತಿಯೊಂದಿಗೆ ಬೆರೆಯುವುದು. ಮತ್ತು ಬಿಟ್ಟು ಹೋದವರನ್ನು ಕ್ಷಮಿಸುವುದು, ಅವರ ನೆನಪುಗಳು ನಮ್ಮ ಬದುಕನ್ನು ಆಳದಂತೆ ಅವರ ನೆನಪಿಗೆ ನಾವು ಅಡಿ ಸಿಲುಕಿ ನರಳದಂತೆ ಎಚ್ಚರ ವಹಿಸಬೇಕು. ಕಾಲವೇ ಎಲ್ಲವನ್ನು ಎಲ್ಲರನ್ನು ಮರೆಸುತ್ತದೆ ಹುಷಾರಾಗಿರಬೇಕು.

ಬದುಕಿಗೆ ಬಂದ ಎಲ್ಲರೂ ಎಂದಿಗೂ ನಮ್ಮವರಾಗುವುದಿಲ್ಲ. ಕೆಲವರು ನೆನಪಾಗುತ್ತಾರೆ, ಕೆಲವರು ಪಾಠವಾಗಿ ಉಳಿಯುತ್ತಾರೆ, ನಾವು ಮಾತ್ರ ಪ್ರತಿ ಹಂತದಲ್ಲಿಯೂ ಪಾಠವನ್ನು ಕಲಿಯಬೇಕೇ ವಿನಃ ನೋವನ್ನು ಎಂದಿಗೂ ಉಳಿಸಿಕೊಳ್ಳಬಾರದು...



ಯಲ್ಲಪ್ಪ ಮಲ್ಲಪ್ಪ ಹರ್ನಾಳಗಿ
ಕೊಪ್ಪಳ

# ಸವೆಸಿದ ದಾರಿ

ಜಟಿಲ ಜಾಲದಲ್ಲಿ, ಹೂಬನದಲ್ಲಿ,
ಮತ್ತೆ ಆ ವರ್ತುಲ ಆವರ್ತ ಪಥದಲ್ಲಿ,
ಸವೆಸಿದ ದಾರಿಗಳ ಕುರುಹು ಕೊಡು;
ಇನ್ನೂ ಬದುಕಿರುವ ಪುರಾವೆ ಕೊಡು..

ಹುಸಿ ಭರವಸೆಯ ಹೂಮುಡಿದು
ಬಂದು ಸೇರುವೆನೆಂದವಳ
ಕಾಯ್ದಣಿದು ಸೊರಗಿದ ಆ ಸಂದೂಕು
ಓಣಿಯಲಿ,
ಸವೆಸಿದ ದಾರಿಗಳ ಕುರುಹು ಕೊಡು;
ಇನ್ನೂ ಬದುಕಿರುವ ಪುರಾವೆ ಕೊಡು..

ಎದೆಗವುಚಿಕೊಂಡವರ ಎಡಗೈಯಲ್ಲಿ ಎರಡಗುಳಿನ ಕತ್ತಿ,
ಪಕ್ಕಾದಿಯವನ ಪಹರೆಯಲಿ ಎರಡೊತ್ತಿನ ಬುತ್ತಿ;
ಹೊತ್ತು ಹಡೆಯಿತೋ? ಉಳಿ ಪೆಟ್ಟಿಗೆ ಕಲ್ಲು
ಶಿಲೆಯಾಯಿತೋ??

ಬರಡು ಹಾದಿಯಲಿ ಬೆವರ ಹನಿಗಳು ಬತ್ತಿ,
ಬಿರುಕು ಬಿಟ್ಟ ನೆಲದಲಿ ಮೌನವನ್ನೇ ಬಿತ್ತಿ;
ಬದುಕಿನ ಆವರ್ತಕ್ಕೆ ಬಿಂದುವಾಗಿ ಉಳಿಯುವ
ಮುನ್ನ,
ಉಸಿರ ಪಿಸುಮಾತಿಗೆ ಒಂದು ಅರ್ಥ ಕೊಡು..
ಇನ್ನ!

ಮತ್ತೆ ಅದೇ ಸುಳಿಗೆ, ಅದೇ ಆವರ್ತಕ್ಕೆ,
ಉತ್ತರವಿಲ್ಲದ ಈ ಘೋರ ಜಗತ್ತಿಗೆ;
ಕೊನೆಯ ಅಂಕದಲಿ ತೆರೆ ಬೀಳುವ ಮುನ್ನ,
ನಾ ನಾನಾಗಿಯೇ ಇರುವೆ ಎನ್ನುವ ಸಣ್ಣ?

ಸವೆಸಿದ ದಾರಿಗಳ ಕುರುಹು ಕೊಡು;
ಇನ್ನೂ ಬದುಕಿರುವ ಪುರಾವೆ ಕೊಡು..

ಹುಸೇನಿ

# 'ಮಮತ ಕಿಚನ್'



ಬೀಟ್ರೂಟ್, ಕ್ಯಾರಟ್, ಟೊಮ್ಯಾಟೋ ಸೂಪ್ ಚಳಿಗಾಲದಲ್ಲಿ ಬಿಸಿ ಬಿಸಿ ಸೂಪ್ ಕುಡಿಯೋದು ಯಾರಿಗೆ ತಾನೇ ಇಷ್ಟ ಆಗೋಲ್ಲ. ಒಬ್ಬಬ್ಬೊ-ರಿಗೆ ಒಂದೊಂದು ಸೂಪ್ ಇಷ್ಟ ಆಗುತ್ತೆ. ಮನೆಯಲ್ಲಿ ಮಾಡೋ ಸೂಪ್ ಆರೋಗ್ಯಕ್ಕೆ ಒಳ್ಳೆಯದು. ಈ ಸೂಪ್ ಗೆ ಯಾವುದೇ ಮೈದಾ, ಕಾರ್ನ ಪೌಡರ್ ಹಾಕದೆ ಮಾಡಿರೋದು. ಆರೋಗ್ಯಕ್ಕೆ ಅಷ್ಟೇ ಅಲ್ಲ ಬಾಯಿಗೂ ಸಿಕ್ಕಾಪಟ್ಟೆ ರುಚಿ ಮಾಡುವ ವಿಧಾನ ಕೂಡಾ ಸುಲಭ.

ಮಾಡಲು ಬೇಕಾಗುವ ಸಾಮಗ್ರಿಗಳು

ಬೀಟ್ರೂಟ್ ಕ್ಯಾರಟ್ ಟೊಮೇಟೊ ಈರುಳ್ಳಿ ಬೆಳ್ಳುಳ್ಳಿ ಕಾಳು ಮೆಣಸು ಬೆಣ್ಣೆ/ ತುಪ್ಪ ರುಚಿಗೆ ತಕ್ಕಷ್ಟು ಉಪ್ಪು. ಮೊದಲು ಎಲ್ಲಾ ತರಕಾರಿಗಳನ್ನ ಚೆನ್ನಾಗಿ ತೊಳೆದು, ಹೆಚ್ಚಿ, ಕುಕ್ಕರಿನಲ್ಲಿ ತರಕಾರಿ ಮುಳುಗುವಷ್ಟು ನೀರು ಹಾಕಿ 2/3 ಸೀಟಿ/ವಿಷಲ್ ಹೊಡೆಸಬೇಕು. ಅಷ್ಟರಲ್ಲಿ 8/10 ಬೆಳ್ಳುಳ್ಳಿ ಎಸಳು ಸಣ್ಣಗೆ ಹೆಚ್ಚಿಡಬೇಕು. 10/15 ಕಾಳು ಮೆಣಸು ತರಿ ತರಿಯಾಗಿ ಕುಟ್ಟಿ ಪುಡಿ ಮಾಡಿಡಬೇಕು. ಬೆಂದ ತರಕಾರಿ ಸ್ವಲ್ಪ ಆರಿದ ನಂತರ ಮಿಕ್ಸಿ ಜಾರಿನಲ್ಲಿ ನುಣ್ಣಗೆ ರುಬ್ಬಬೇಕು.

ಒಂದು ಪಾತ್ರೆಗೆ ಒಂದು ಚಮಚ ಬೆಣ್ಣೆ ಅಥವಾ ತುಪ್ಪ ಹಾಕಿ, ಸ್ವಲ್ಪ ಜೀರಿಗೆ ಸಿಡಿಸಿ, ಹೆಚ್ಚಿದ ಬೆಳ್ಳುಳ್ಳಿ ಹಾಕಿ ಕೆಂಪಗೆ ಹುರಿದು, ನಂತರ ರುಬ್ಬಿದ ಮಿಶ್ರಣ ಹಾಕಿ, ಹದಕ್ಕೆ ತಕ್ಕಷ್ಟು ನೀರು ಸೇರಿಸಬೇಕು (ಜಾಸ್ತಿ ತೆಳ್ಳಗೆ ಬೇಡ). ಸೂಪ್ ಕನ್ಸಿಸ್ಟನ್ಸಿ ಇರಬೇಕು. ರುಚಿಗೆ ತಕ್ಕ ಉಪ್ಪು, ಕುಟ್ಟಿದ ಕಾಳುಮೆಣಸು ಪುಡಿ ಹಾಕಿ ಮತ್ತಷ್ಟು ಕುದಿಸಬೇಕು. ರುಚಿಯಾದ, ಘಮ ಘಮಿಸುವ ಸೂಪ್ ರೆಡಿ. ಸ್ವಲ್ಪ ಕೊತ್ತಂಬರಿ ಸೊಪ್ಪು ಹಾಕಿ ಬಿಸಿ ಬಿಸಿ ಕುಡುದ್ರೆ ಸ್ವರ್ಗ, ಮಧ್ಯ ಕಾಳುಮೆಣಸು, ಜೀರಿಗೆ, ಬೆಳ್ಳುಳ್ಳಿ ಸಿಗ್ತಾ ಇದ್ರೆ ತುಂಬಾ ಚಂದ. ಮಮತ ತೋಟಸ್ ಪುಣೆ, ಮಹಾರಾಷ್ಟ್ರ.



ಮಮತ ತೋಟೇಶ್ ಪುಣೆ. ಮಹಾರಾಷ್ಟ್ರ.

# ಕನಕದಾಸರ ಚಿಂತನೆಗಳು: ನಾವು ಎದುರಿಸಬೇಕಾದ ಸತ್ಯ.

ಕನಕದಾಸರು ಮಾನವ ಕುಲ ಕಂಡ ವೈಚಾರಿಕ ಪ್ರಜ್ಞೆಯ ಚಿಂತಕರಲ್ಲಿ ಅಗ್ರಗಣ್ಯರು.ಮನುಷ್ಯನನ್ನು ಕುಲ ಜಾತಿ ಅಂತಸ್ತು ಎಂಬ ಕಟ್ಟಡಗಳಲ್ಲಿ ಅಳೆದು ಶ್ರೇಣಿಕರಣ ಮಾಡುವದನ್ನು ಒಪ್ಪದ ವೈಚಾರಿಕ ಸಿದ್ಧಾಂತ ಅವರದಾಗಿತ್ತು. ಏನನ್ನು ಬದುಕಿದರೋ ಅದನ್ನು ಬರೆದ, ಏನನ್ನು ಬರೆದೋ ಅದನ್ನ ಬದುಕಿದ ಕನ್ನಡ ನಾಡಿನ ಸಂತತರಲಿ ಕನಕದಾಸರಿಗೆ ಅಗ್ರಸ್ಥಾನವಿದೆ.

ಈ ದೇಶದಲ್ಲಿ ಧರ್ಮದ ಹೆಸರಿನಲ್ಲಿ ಸಾಮಾನ್ಯ ಜನರನ್ನು ಶೋಷಣೆ ಮಾಡುವ ಒಂದು ಇತಿಹಾಸವೇ ಇದೆ. ಅಂತಹ ಪರಿಸರದಲ್ಲಿಯೂ ಬಾಳಬೇಕಾದ ಅನಿವಾರ್ಯತೆ ಕನಕದಾಸ-ರಿಗೆ ಬಂದರೂ ಆದರ ನಡುವೆಯೆ ಇದ್ದು ತಮ್ಮ ವೈಚಾರಿಕ ತಿಳುವಳಿಕೆಯ ಬೆಳಕನ್ನು ಅವರಿಗೂ ಸಾದ್ಯವಾದಷ್ಟು ಹಂಚುವ ಕಾರ್ಯವನ್ನು ಅವರು ಮಾಡಿದರು. ಅವರ ಬದುಕಿನ ಸುತ್ತ ಹಬ್ಬಿರುವ ಕಥೆಗಳಾದ ಬಾಳೆ ಹಣ್ಣಿನ ಕಥೆ, ಸ್ವರ್ಗಕ್ಕೆ ಹೋಗುವ ಕಥೆ ಇಂಥವುಗಳನ್ನು ಇದನ್ನೇ ಸಾರುತ್ತವೆ. ಇಂದು ಕುರುಬ ಜನಾಂಗ ಕನಕದಾಸರನ್ನು ತನ್ನ ಧರ್ಮದವನು ಎಂದು ಒಪ್ಪಿ ಕನಕರ ಚಿಂತನೆಗಳ ಕುರಿತು ಹೆಮ್ಮೆ ಪಡುತ್ತ ಬಂದಿರುವದು ಇತಿಹಾಸವೇ ಆಗಿದೆ.

ಕನಕದಾಸರ ಜಯಂತಿಯಂಥ ಆಚರಣೆ ಮಾಡುವದು
ಕನಕರ ಫೋಟೋ ಮೆರವಣಿಗೆ, ಮಾಡುವದು ಕನಕರ ಹೆಸರಿನಲ್ಲಿ ಇನ್ನೂ ಏನೇನೋ ಮಾಡಿ ಅಂದೊಂದು ದಿನ ಕನಕರ ಬಗ್ಗೆ ಅಭಿಮಾನ ತೋರಿಸಿ ಉಳಿದ ದಿನಗಳಲ್ಲಿ ಅವರ ವೈಚಾರಿಕ ಚಿಂತನೆಯ ಬಗ್ಗೆ ತಿಲ ಮಾತ್ರವೂ ಯೋಚಿಸದೆ ತನ್ನ ಅಜ್ಞಾನದಲ್ಲಿ ಮುಳುಗಿ ಬಿಡುವ ಹಾಲುಮತ ಸಮಾಜವನ್ನು ನಾವು ನೋಡುತ್ತೇವೆ.
ಕನಕರ ಬದುಕಿನ ಬಹುದೊಡ್ಡ ಸಂಕೇತವೆಂದರೆ ಮನುಷ್ಯ ತನ್ನ ಜ್ಞಾನದ 'ಮೂಲಕ ಜಗತ್ತನ್ನು ಆಳಬೇಕು ಎನ್ನುವದು. Idias rule the world ಎನ್ನುವ ಹಾಗೆ ವೈಚಾರಿಕ ಚಿಂತನೆ ಕಡಿಮೆ ಇರುವ ಈ ಜನ ಕನಕದಾಸರನ್ನು ತಮ್ಮ ಎಚ್ಚರಿಕೆಯ ಸಂಕೇತವಾಗಿ ಕಾಣಬೇಕಾಗಿದೆ.

ಸಮಾಜದಲ್ಲಿನ ಪ್ರತಿಯೊಂದನ್ನು ಚಕಿತ್ಸಕ ಬುದ್ಧಿಯಿಂದ ಕಂಡ ಕನಕದಾಸರು ಎಲ್ಲೆಲ್ಲಿ ತಪ್ಪು ಕಾಣುವುದೋ ಅದನ್ನು ಧಿಕ್ಕ-ರಿಸುತ್ತಾರೆ. ಇದನ್ನು ಇಂದಿನ ಯುವ ಜನಾಂಗ ಮರೆಯಬಾರದು. ಅವರ ಬದುಕಿನ ಆದರ್ಶದಿಂದ ರೂಢಿಸಿಕೊಳ್ಳಬೇಕಾದ ಪ್ರಮುಖ ತತ್ವ ಇದು. ಎಲ್ಲರೂ ಒಂದೇ ನಮೂನೆಯ ದೇಹ ಸ್ವರೂಪವಿರುವದನ್ನು ಹೇಳುವ ಕನಕದಾಸರು ಮೇಲು ಜಾತಿಯವರಿಗೆ ಒಂದು ದೇಹ ರಚನೆ, ಕೀಳು ಜಾತಿಯವರಿಗೆ ಇನ್ನೊಂದು ಬಗೆಯ ದೇಹ ರಚನೆ ಇರುವದು ಸಾಧ್ಯವಿಲ್ಲ ಎಂಬುದನ್ನು ಸಾರುತ್ತಾರೆ. "ನರದೇಹ ಹೊತ್ತಂತ ತಿರುಕ " "ಇಂಬಿಲ್ಲದ ಹೊಲೆಗಂಡ ತಾವಿನಲಿ ಬಂದಂಥ ಡಂಬಕ " ಇದೇ ಮೊದಲಾದ ಮಾತಿನಲ್ಲಿ ತನ್ನನ್ನು ತಾನು ಬಣ್ಣಿಸುವ ಕನಕದಾಸರು ನಿಚ್ಚ ಕಾಗಿನೆಲೆಯಾದಿಕೇಶವನ ಹುಚ್ಚು ಹಿಡಿದವನು ಎಂದು ಕರೆದುಕೊಂಡಿದ್ದಾರೆ. ಅಂತೆಯೆ ಕೀರ್ತನೆಯಲ್ಲಿ ನಿಚ್ಚ ಕಾಗಿನೆಯಾದಿಕೇಶವನ ಹುಚ್ಚಗೆ ನನಗಿನ್ಯಾತರ ಕುಲವಯ್ಯ ಎಂದು ಸಾರಿರುವದು ಮಹತ್ವದ್ದಾಗಿದೆ.

ಎಲ್ಲರನ್ನು ಮನುಷ್ಯ ಜಾತಿ ಎಂದು ಸಾರುವುದೇ ಇಲ್ಲ ಪ್ರಧಾನವಾದ ಸಂಗತಿ. ಕನಕದಾಸರು ಸಾರಿದ್ದು ಜಾತಿ ಸಾಮರಸ್ಯವನ್ನು ಎಂದು ಇಂದಿನ ನಾವು ಅರಿಯಬೇಕಾಗಿದೆ. ಯಾವುದೇ ಜಾತಿಯವ-ರಿರಲಿ ಅವರಜಾತಿ ಶ್ರೇಷ್ಠ ಎಂದು ಹೋರಾಡುವದನ್ನು ಬಿಟ್ಟು ಎಲ್ಲವೂ 'ಹ-ರಿಯ ಭಕ್ತಿಯಲ್ಲಿ ಒಂದ' ಎಂದು ಸಾರಿದ್ದನ್ನು ಅರಿಯುವದು ಮುಖ್ಯವಾದುದು. ತಮ್ಮನ್ನು ತಾವು 'ಕುರುಬರು 'ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ಕನಕದಾಸರು ಕುರುಬ ಎಂದರೆ ಯಾರು ಎಂದು ವ್ಯಾಖ್ಯಾನಿಸುವದನ್ನು ಗಮನಿಸಬೇಕು. ಕುರುಬರ ಚಿತ್ರಣ ನೀಡುತ್ತಾ ಅವರು ಲಾಲಿಸುವ ಕುರಿಮರಿ ಎಂಥವೆಂದರೆ ಅಷ್ಟಮದ ಮತ್ಸರಗಳೆಂತೆಂಬ ಟಗರುಗಳು ದೃಷ್ಟಿ
ಜೀವಾತ್ಮನೆಂದೆಂಬ ಆಡು
ಸೃಷ್ಟಿ ಸಿದ್ದ, ಪ್ರಸಿದ್ದ ವೆಂತೆಂಬ ಹೋತಗಳು
ಕಟ್ಟಿ ಕೊಲಿನಲಿ ಇರಿಯುತಿಹ ನಮ್ಮಜ್ಜ.
ತಾನು ಎಂಥಹ ಪರಂಪರೆಯವನು ಎಂದರೆ 'ಬಾಯಾ-ರಿದ ವೇದಶಾಸ್ತ್ರ ಪುರಾಣಗಳಿಗೆ (ಶ್ವಾನಗಳಿಗೆ) ದಾರಿ ತೋರಿಸಿದವನು' ಎಂದದ್ದು ಅಥ-ರ್ಪೂರ್ಣವಾಗಿದೆ.

ವೇದ ಶಾಸ್ತ್ರ ವೆಂತೆಂಬ ಶಾನಗಳು
ಕಾದಿದ್ದು ನಮ್ಮಜ್ಜ ಹಿಂಡೊಳಗ
ಹಾದಿ ಗಾದೆ ಕೂಗಿ ಬಾಯಾರಿ ಕಾಲ್ಗೆಡಲು
ಆದರಿಸಿ ಅಂಬಲಿಯನೆರೆದ ನಮ್ಮಜ್ಜ
ಇದು ಅವರ ಹೇಳುವ ಅಜ್ಜನ ಕಾಯಕ. ಕುರುಬ ಎಂದರೆ ಕೇವಲ ಕುರಿ ಕಾಯುವ ಕುರಿಗಾಹಿ ಅಲ್ಲ. ಗುಡ್ಡ ಗಂಹವರ ಅಲೆಯುವ ಅಲೆಮಾರಿಯಲ್ಲ,
ಅವನು ವೇದಶಾಸ್ತ್ರ ಪುರಾಣಗಳನ್ನೇ ಶ್ವಾನವಾಗಿಸಿಕೊಂಡವನು ಎಂಬುದು ಕನಕದಕದಾಸರ ವಿಚಾರ. ಇಂತಹ ಹಿನ್ನೆಲೆಯಿರುವ ಇಂದಿನ ಕುರುಬರ ತಮ್ಮ ಘನತೆಯನ್ನು ಅರಿಯದೇ ಯಾವುದಾವದೋ ದುಷ್ಟಟಗಳ ದಾಸರಾಗಿ ಕೊಳೆಯುವದನ್ನು ಅವರು ಸಹಿಸಲಾರರು.



ಕನಕದಾಸರ ಒಂದು ಕೀರ್ತನೆಯಲ್ಲಿ ರಂಗನಾಥನ ಮುಂದೆ ನಿಂತು "ಇನ್ನೇಸು ದಿನ ನಿಂತು ಕೂಗಿದರೂ ನಿನ್ನ ದನಿ ಕೇಳುವದಿಲ್ಲ" ಎಂಬ ಸಾಲೊಂದನ್ನು ಹೇಳುತ್ತಾರೆ. ಇದು ಅವರು ನಮಗೆ ಕೊಟ್ಟಿರುವ ನೇರ ಸಂದೇಶದಂತಿದೆ.
ಜಾತಿ ಡಾಂಭಿಕತೆ ನಿರಾಕರಣೆ ಕನಕದಾರು ಜೀವನದುದ್ದಕ್ಕೂ ಮಡುತ್ತಾ ಬಂದ ಬಹುದೊಡ್ಡ ಆದರ್ಶ. ಅವರು ವ್ಯಾಸರಾಯರ ಶಿಷ್ಯರಾದ ಮೇಲೂ ಅಲ್ಲಿನ ಕರ್ಮಠ ಶಿಷ್ಯರು 'ನೀನು ಯಾತರವನು' ಎಂದು ಪ್ರಶ್ನಿಸಿದಾಗ ಕನಕದಾಸರು ಅವ-ರಿಗೆ ಯಾತರವನೆಂದುಸುರುಲಿ ಜಗ ನಾಥ ಮಾಡಿದ ಒಂದು ನರರೂಪವಯ್ಯ ಎಂದು ಉತ್ತ ಚರಿಸುತ್ತಾರೆ.

ಅಂದರೆ ಎಲ್ಲರನ್ನು ನಿರ್ಮಿಸಿದವನು ಜಗನ್ನಾಥನೇ ಆದುದರಿಂದ ನಾನು ಇಂಥ-'ದೇ ಜಾತಿಗೆ ಸೇರಿದವನು ಎಂದು ಹೇಗೆ ಉಸುರಲಿ? ಎಂದು ಪ್ರಶ್ನಿಸುತ್ತಾರೆ.. ಹೀಗೆ ಹೇಳುವಾಗ ಕನಕದಾಸರ ನಾನು ಇಂಥವನೇ ಎಂಬ ಜಾತಿಯು ಅಭಿಮಾನವನ್ನು ತಮ್ಮ ಬಗೆಗೆ ತಾವು ಇರಿಸಿಕೊಂಡಿಲ್ಲ. ಹೀಗೆ ಹೇಳುವ ಮೂಲಕ ಕನಕದಾಸರು ಕುರುಬ ಎಂದರೆ ಕೀಳು ಎಂದು ಹೇಳುತ್ತ ಬಂದಿರುವವರಿಗೆ ಪ್ರತಿ ಉತ್ತರ ನೀಡುತ್ತಿದ್ದಾರೆ. ವೇದಶಾಸ್ತ್ರ ಪುರಾಣಗಳ ನಮ್ಮ ಕುರಿಯ ಹಿಂಡಿನಲ್ಲಿ ಶ್ವಾನವಾಗಿ ಕಾದಿವೆ ಎಂಬ ರೂಪಕ ಸೃಷ್ಟಿಕೊಳ್ಳುವ ಕನಕದಾಸರು ಆ ಮೂಲಕ ತಮ್ಮ ಹಿರಿಮೆಯನ್ನು ಸಾರುತ್ತಾರೆ. ವಿನಯ ಕನಕದಾಸರ ಬದುಕಿನಿಂದ ಇಂದಿನ ನಾವು ರೂಡಿಸಿಕೊಳ್ಳಬೇಕಾದ ಇನ್ನೊಂದು ಗುಣ.

ನಾಲ್ಕಾರು ಕಾವ್ಯಗಳನ್ನು ಬರೆದ, ನೂರಾರು
ಕೀರ್ತನೆಗಳನ್ನು, ಮುಂಡಿಗೆಗಳನ್ನು ಬರೆದ ಈ ಅನುಭಾವಿ ಸಂತ ತನ್ನನ್ನು ತಾನು ದಾಸದಾಸರ ಮನೆಯ ದಾಸಿಯರ ಮಗನಾನು ಸಾಸಿರ ನಾಮದೊಡೆಯ ರಂಗಯ್ಯನ ಮನೆಯ ಎನ್ನುವದನ್ನು ಗಮನಿಸಬೇಕು. ಜಾತಿ-;ಲಿಂಗ-ಅಂತಸ್ತು ಇವುಗಳ ಕಾರಣಕ್ಕೆ ಮನುಷ್ಯ ಬೀಗುವದನ್ನು ಕನದಾಸರು ವಿರೋಧಿಸುತ್ತಾರೆ. ಇಲ್ಲಿ ಅವರದು ಬಸವಣ್ಣಣವರ ದಾರಿ ಎಂದು ತೋರುತ್ತದೆ. ನಾನು ಕುಲದ ಹೊಲುಬು ಮೀರುವದನ್ನು ಅರಿಯಬೇಕು. ತಮ್ಮನ್ನು ತಾವು "ಹಲವು ದಾಸರ ಮನೆಯ ಹೊಲೆ ದಾಸನು ನಾನು, ಕುಲವಿಲ್ಲದ ದಾಸ ಕುರುಬ ದಾಸ " ಎನ್ನುತ್ತಾರೆ.

ಇಲ್ಲಿರುವದು ಅವರ ವಿನಯವೇ ಆಗಿತ್ತು. ನಾನು ಇಂಥದೇ ಜಾತಿಗೆ ಸೇರಿದವನು ಎಂದು ಭಾವಿಸುವದು ಜಾತಿ ವ್ಯವಸ್ಥೆಯ ಮೊದಲ ಲಕ್ಷಣ ಆದ್ದರಿಂದ ಕನಕದಾಸರು ತಮ್ಮನ್ನು ಕೇವಲ ಕುರುಬ ಜಾತಿಯವ ಎಂದು ಸೀಮಿತಗೊಳಿಸದೇ ಸಮಸ್ತ ಮಾನವ ಜಾತಿಯವ ಎಂದುಕೊಳ್ಳುತ್ತಾರೆ .ಬಹಳ ಮಹತ್ವದ ಮಾತೆಂದರೆ ಕನಕದಾಸರು ರಾಜರಾಗಿದ್ದರೂ, ದಂಡನಾಕರಾಗಿದ್ದರೂ ಅಂತರಂಗದಲ್ಲಿ ಪರಮ ಭಕ್ತರಾಗಿದ್ದರು ಎನ್ನುವದು ಇಂದಿನ ನಮಗೆ ಮುಖ್ಯವಾಗಬೇಕು. ಕನಕದಾಸರು ಸಾರಿದ್ದು ಜೀವನದಲ್ಲಿ 'ನನಗೆ ನೀನೆ ಗತಿ ಬೇರೆ ಯಾರೂ ನನ್ನನ್ನು ಕಾಯಲಾರರು' ಎಂಬ ಸತ್ಯವನ್ನು. ಬಂಧುಗಳೆಂದೋ, ಆಪ್ತರೆಂದೋ ನಾವು ಹಲವರನ್ನು ನಂಬಿರುತ್ತೇವೆ ಆದರೆ ಅವರು ಯಾರೂ ನಮ್ಮನ್ನು ಉಳಿಸಲು ಸಾಧ್ಯವಿಲ್ಲ ಎಂದವರು ಸಾರುತ್ತಾರೆ. ಕನಕ ಜಯಂತಿ ಮತ್ತೆ ಮತ್ತೆ ಬರುತ್ತದೆ. ನಮ್ಮ ಯುವಕರು ರಾಜಕೀಯ ಧುರೀಣರು ಕನಕ ಜಯಂತಿ ಯನ್ನು ಆಚ-'ರಿಸುವಾಗ ಕನಕ ದಾಸರ ಬಗೆಗೆ ಅಭಿಮಾನ ಭಕ್ತಿ ತೋರಿಸುವದರ ಜೊತೆಗೆ ಅವರ ತತ್ವಗಳ ಅಚರಣೆಗೆ ಮಹತ್ವ ಕೊಡಬೇಕು. ಕನಕದಾಸರು ಸಾರಿದ್ದು ಎಲ್ಲರೂ ಸೇರಿ ಹೋಗುವ ಸಮನ್ವಯದ ಹಾದಿ. ಅದು ನಮ್ಮ ಹಾದಿಯೂ ಆಗಬೇಕು. ಒಡೆಯುವದು ಮುಖ್ಯವಾಗಬಾರದು, ಕೂಡಿಸುವದು ಮುಖ್ಯವಾಗಬೇಕು.



ವೈ.ಎಂ.ಯಾಕೊಳ್ಳಿ

# ಪ್ರಜಾ ಸೇವಾ ಆಂದೋಲನ: ಜನರ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರಕ್ಕೆ ಆದ್ಯತೆ

ಅ.ಶ. ಸುದ್ದಿ ವಿಜಯಪುರ

**ವಿಜಯಪುರ: ಗ್ರಾಮೀಣ ಜನರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಿ, ಸಾಧ್ಯವಾದಷ್ಟು ಸಮಸ್ಯೆಗಳನ್ನು ಸ್ಥಳದಲ್ಲೇ ಪರಿಹರಿಸುವ ಉದ್ದೇಶದಿಂದ ಸರಕಾರ ಪ್ರಜಾ ಸೇವಾ ಆಂದೋಲನವನ್ನು ಜಾರಿಗೊಳಿಸಿದ್ದು, ಸಾರ್ವಜನಿಕರು ಈ ಕಾರ್ಯಕ್ರಮದ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ನಾಗಠಾಣ ಮತಕ್ಷೇತ್ರದ ಶಾಸಕ ವಿಠ್ಠಲ ಕಟಕದೊಂಡ ಹೇಳಿದರು.**



ವಿಜಯಪುರ ತಾಲೂಕಿನ ನಾಗಠಾಣದಲ್ಲಿ ಶನಿವಾರ ನಡೆದ ತಾಲೂಕ ಮಟ್ಟದ ಪ್ರಜಾ ಸೇವಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ಜಿಲ್ಲಾ ಹಾಗೂ ತಾಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಭಾಗವಹಿಸಿದ್ದು, ಸಾರ್ವಜನಿಕರು ತಮ್ಮ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸಲು ಪ್ರತ್ಯೇಕ ಕೌಂಟರ್‌ಗಳನ್ನು ತೆರೆಯಲಾಗಿದೆ. ಅಧಿಕಾರಿಗಳು ಸ್ವೀಕರಿಸಿದ ಅರ್ಜಿಗಳನ್ನು ಪರಿಶೀಲಿಸಿ, ಸಾಧ್ಯವಾದಷ್ಟು ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಬೇಕು ಎಂದು ಸೂಚಿಸಿದರು. ಅರಣ್ಯೀಕರಣದಿಂದ ಪರಿಸರ ಸಂರಕ್ಷಣೆ ಹಾಗೂ ಮಳೆಯ ಪ್ರಮಾಣ ಹೆಚ್ಚಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ತೇಗು ಸಿರಿ ಯೋಜನೆ ಜಾರಿಗೊಳಿಸಿದೆ. ರೈತರು ಈ ಯೋಜನೆಯಡಿ ಉಚಿತವಾಗಿ ತೇಗು ಸಸಿಗಳನ್ನು ಪಡೆದು ತಮ್ಮ ಜಮೀನಿನಲ್ಲಿ ಬೆಳೆಸಬೇಕು.

ಸುಮಾರು 18 ವರ್ಷಗಳ ಕಾಲ ತೇಗು ಮರಗಳನ್ನು ಬೆಳೆಸಿದರೆ ಉತ್ತಮ ಆದಾಯ ಗಳಿಸುವ ಅವಕಾಶವಿದ್ದು, ರೈತರು ಯೋಜನೆಯ ಸಂಪೂರ್ಣ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು. ಗ್ರಾಮಗಳ ಅಭಿವೃದ್ಧಿಯಿಂದಲೇ ದೇಶದ ಅಭಿವೃದ್ಧಿ ಸಾಧ್ಯ ಎಂಬ ಮಹಾತ್ಮ ಗಾಂಧೀಜಿಯವರ ಆಶಯದಂತೆ ಗ್ರಾಮೀಣ ಪ್ರದೇಶಗಳ ಸಮಗ್ರ ಅಭಿವೃದ್ಧಿಗೆ ಸರ್ಕಾರ ಆದ್ಯತೆ ನೀಡುತ್ತಿದೆ. ಪ್ರಜಾ ಸೇವಾ ಆಂದೋಲನದ ಮೂಲಕ ಗ್ರಾಮೀಣ ಮಟ್ಟದಲ್ಲೇ ಜನರ ಅಹವಾಲುಗಳನ್ನು ಆಲಿಸಿ, ಅವುಗಳಿಗೆ ಪರಿಹಾರ ಕಲ್ಪಿಸುವ ಪ್ರಯತ್ನ ನಡೆಯುತ್ತಿದೆ ಎಂದರು. ರಸ್ತೆಗಳನ್ನು ಹಂತ ಹಂತವಾಗಿ ದುರಸ್ತಿ ಮಾಡಲಾಗುತ್ತಿದ್ದು, ಈಗಾಗಲೇ ಶೇ.80ರಷ್ಟು ರಸ್ತೆ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

ಉಳಿದ ಶೇ.20ರಷ್ಟು ರಸ್ತೆಗಳನ್ನು ಸಹ ಅಭಿವೃದ್ಧಿಪಡಿಸುವುದಾಗಿ ಶಾಸಕ ವಿಠ್ಠಲ ಕಟಕದೊಂಡ ತಿಳಿಸಿದರು. ಕೆರೆಗಳನ್ನು ತುಂಬಿಸುವ ಕಾರ್ಯಕ್ಕೂ ಆದ್ಯತೆ ನೀಡಲಾಗಿದೆ. ಬಹುಹಳ್ಳಿ ಕುಡಿಯುವ ನೀರು ಯೋಜನೆಯಡಿ ನಾಗಠಾಣ ಹಾಗೂ ಹುಣಶ್ಯಾಳ ಕೆರೆ ತುಂಬಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದ್ದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಬಿ. ಪಾಟೀಲ ಅವರ ಸಹಕಾರದಿಂದ ಮತಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ಒತ್ತು ನೀಡಲಾಗಿದೆ ಎಂದರು. ಶಾಲೆಗಳಿಗೆ ಅಗತ್ಯವಿರುವ ಹೆಚ್ಚುವರಿ ಕೊಠಡಿಗಳ ನಿರ್ಮಾಣ ಸೇರಿದಂತೆ ಶಿಕ್ಷಣ ಕ್ಷೇತ್ರದ ಮೂಲಸೌಕರ್ಯ ಅಭಿವೃದ್ಧಿಗೂ ಅನುದಾನ ನೀಡಲಾಗಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ನಾಗಠಾಣ ಗ್ರಾಮದ ಅರ್ಹ ಫಲಾನುಭವಿಗಳಿಗೆ ಹಕ್ಕುಪತ್ರ, ಹೊಸ ಪಿಂಚಣಿ ಆದೇಶ ಹಾಗೂ ಇ-ಸ್ವತ್ತು ದಾಖಲೆಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ತಾಲೂಕು ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ರಾಜಶೇಖರ ಅವಜಿ, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಗುರುಶಾಂತಪ್ಪ ಬೆಳ್ಳುಂಡಗಿ, ತಹಸೀಲ್ದಾರ್ ಸೇರಿದಂತೆ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಸಿಬ್ಬಂದಿ ಹಾಗೂ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಪಂಚಾಯತ್ ರಾಜ್ ಇಲಾಖೆ, ಹೆಸ್ಕಾಂ, ಅರಣ್ಯ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಸ್ವೀಕರಿಸಲಾದ ಅಹವಾಲುಗಳನ್ನು ಸಂಬಂಧಿಸಿದ ಅಧಿಕಾರಿಗಳು ಪರಿಶೀಲಿಸಿ, ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಲು ಕ್ರಮವಹಿಸಲಾಯಿತು.

1ನೇ ಪುಟದಿಂದ....

ಮೂಡಿಸುವುದು ಮತ್ತು ನಾಯಕತ್ವದ ಗುಣಗಳನ್ನು ಬೆಳೆಸುವುದು ಪ್ರಜಾಪ್ರಭುತ್ವದ ದೃಷ್ಟಿಯಿಂದ ಮಹತ್ವದ್ದೇ ಸರಿ. ಆದರೆ ಅದಕ್ಕಾಗಿ ವಿದ್ಯಾರ್ಥಿ ಚುನಾವಣೆಗಳನ್ನು ರಾಜಕೀಯ ಪಕ್ಷಗಳ ಪ್ರಭಾವದಿಂದ ಮುಕ್ತವಾಗಿಡಲು ಸರ್ಕಾರ ಯಾವ ರೀತಿಯ ವ್ಯವಸ್ಥೆ ರೂಪಿಸಲಿದೆ ಎಂಬುದು ಪ್ರಮುಖ ಪ್ರಶ್ನೆಯಾಗಿದೆ. ವಿದ್ಯಾರ್ಥಿ ಚುನಾವಣೆಯಲ್ಲಿ ಗೆಲ್ಲುವ ಅಭ್ಯರ್ಥಿಗಳ ಹಿಂದೆ ರಾಜಕೀಯ ಪಕ್ಷಗಳ ಬೆಂಬಲ, ಹಣಬಲ ಅಥವಾ ಸಂಘಟನಾ ಶಕ್ತಿ ಕೆಲಸ ಮಾಡಿದರೆ, ಸಾಮಾನ್ಯ ವಿದ್ಯಾರ್ಥಿಗಳಿಗೆ ಸಮಾನ ಅವಕಾಶ ಸಿಗುತ್ತದೆಯೇ? ಚುನಾವಣೆ ಗೆಲ್ಲುವ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳ ನಡುವೆ ಗುಂಪುಗಾರಿಕೆ, ವೈಮನಸ್ಸು ಮತ್ತು ವೈಯಕ್ತಿಕ ಸಂಘರ್ಷಗಳು ಉಂಟಾದರೆ ಅದರ ಹೊಣೆ ಯಾರು ಹೊರುತ್ತಾರೆ? ಎಂಬ ಪ್ರಶ್ನೆಯನ್ನು ವಿದ್ಯಾರ್ಥಿ ಸಂಘಟನೆಗಳ ಮುಖಂಡರು ಮುಂದಿಡುತ್ತಾರೆ. ಈ ಹಿಂದೆ ವಿದ್ಯಾರ್ಥಿ ಚುನಾವಣೆಗಳು ನಡೆದ ಸಂದರ್ಭಗಳಲ್ಲಿ ರಾಜಕೀಯ ಸಂಘರ್ಷಗಳು ಕಾಲೇಜು ಆವರಣಕ್ಕೆ ಪ್ರವೇಶಿಸಿದ ಆರೋಪಗಳು ಕೇಳಿಬಂದಿದ್ದವು. ಇದೇ ಕಾರಣಕ್ಕೆ ಹಲವು ವರ್ಷಗಳ ಹಿಂದೆ ವಿದ್ಯಾರ್ಥಿ ಚುನಾವಣೆಗಳಿಗೆ ಕಡಿವಾಣ ಹಾಕಲಾಗಿತ್ತು. ಇದೀಗ ಅದೇ ವ್ಯವಸ್ಥೆಯನ್ನು ಮರುಜಾರಿಗೆ ತರುವ ಸಂದರ್ಭದಲ್ಲಿ, ಹಿಂದಿನ ಅನುಭವಗಳಿಂದ ಪಾಠ ಕಲಿಯಲಾಗಿದೆಯೇ ಎಂಬ ಪ್ರಶ್ನೆಯೂ ಎದುರಾಗುತ್ತಿದೆ. ವಿದ್ಯಾರ್ಥಿಗಳಿಗೆ ನಾಯಕತ್ವದ ಗುಣ ಬೆಳೆಸುವ ಉದ್ದೇಶವಿದ್ದರೆ, ಚುನಾವಣೆ ಮಾತ್ರವೇ ಏಕೈಕ ಮಾರ್ಗವೇ? ವಿದ್ಯಾರ್ಥಿ ಸಂಸತ್ತು, ಚರ್ಚಾ ವೇದಿಕೆ, ಮಾದರಿ ಸಂಸತ್ತು, ಶೈಕ್ಷಣಿಕ ಸಂಘಟನೆಗಳು ಮತ್ತು ಸಾಮಾಜಿಕ ಸೇವಾ ಚಟುವಟಿಕೆಗಳ ಮೂಲಕವೂ ಯುವಕರಲ್ಲಿ ನಾಯಕತ್ವ ಬೆಳೆಸಲು ಸಾಧ್ಯವಲ್ಲವೇ? ಎಂಬ ಪ್ರಶ್ನೆಯೂ ಇದೆ. ಮತ್ತೊಂದೆಡೆ, ವಿದ್ಯಾರ್ಥಿ ಚುನಾವಣೆಗಳು ರಾಜಕೀಯ ಅರಿವು ಮತ್ತು ಪ್ರಜಾಪ್ರಭುತ್ವದ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವ ಅವಕಾಶವೂ ಆಗಬಹುದು. ಆದರೆ ಈ ಚುನಾವಣೆಗಳು ಪಕ್ಷ ರಾಜಕಾರಣದ ವಿಸ್ತರಣೆಯಾಗದೆ, ವಿದ್ಯಾರ್ಥಿಗಳ ಸ್ವತಂತ್ರ ಧ್ವನಿಗೆ ವೇದಿಕೆಯಾಗಬೇಕಾದರೆ ಸ್ಪಷ್ಟ ನಿಯಮಗಳು, ಹಣಬಲಕ್ಕೆ ಕಡಿವಾಣ ಹಾಗೂ ರಾಜಕೀಯ ಪಕ್ಷಗಳ ನೇರ ಹಸ್ತಕ್ಷೇಪಕ್ಕೆ ನಿರ್ಬಂಧ ಅಗತ್ಯ. ಹೀಗಾಗಿ ಸರ್ಕಾರದ ಮುಂದೆ ಈಗಿರುವ ದೊಡ್ಡ ಸವಾಲು ಚುನಾವಣೆ ನಡೆಸುವುದಷ್ಟೇ ಅಲ್ಲ; ವಿದ್ಯಾರ್ಥಿ ಚುನಾವಣೆಗಳು ನಿಜವಾಗಿಯೂ ವಿದ್ಯಾರ್ಥಿಗಳ ನಾಯಕತ್ವ ಬೆಳೆಸುವ ಪ್ರಜಾಪ್ರಭುತ್ವದ ವೇದಿಕೆಯಾಗುತ್ತವೆಯೇ ಅಥವಾ ಕಾಲೇಜು ಆವರಣದಲ್ಲೇ ರಾಜಕೀಯ ವೈಮನಸ್ಸಿಗೆ ಹೊಸ ಬಾಗಿಲು ತೆರೆಯುತ್ತವೆಯೇ? ಎಂಬುದಕ್ಕೆ ಉತ್ತರ ಕಂಡುಕೊಳ್ಳುವುದಾಗಿದೆ.

# ಹುಲಿಹೈದರ್ ಗ್ರಾಮದಲ್ಲಿ ಪ್ರಜಾಸೇವೆ ಆಂದೋಲನ ಕಾರ್ಯಕ್ರಮ





ಅ.ಶ. ಸುದ್ದಿ ಕನಕಗಿರಿ

**ಕನಕಗಿರಿ: ತಾಲೂಕಿನ ಹುಲಿಹೈದರ್ ಗ್ರಾಮದಲ್ಲಿ ಪ್ರಜಾಸೇವೆ ಆಂದೋಲನ ಕಾರ್ಯಕ್ರಮ ನಡೆಯಿತು.**

**ಸಭೆಯ ಅಧ್ಯಕ್ಷತೆಯನ್ನು ಕೊಪ್ಪಳ ಉಪವಿಭಾಗಧಿಕಾರಿಗಳದ ಮೆಹಬೂಬ್ ಜಿಲಾನ್ ಖುರೇಶಿ ರವರು ವಹಿಸಿಕೊಂಡಿದ್ದರು. ಕಾರ್ಯಕ್ರಮದಲ್ಲಿ ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿ, ಅವುಗಳಿಗೆ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಚರ್ಚೆ ನಡೆಸಿದರು.**

ಗ್ರಾಮದ ವಿವಿಧ ಮೂಲಭೂತ ಸೌಕರ್ಯಗಳು, ರಸ್ತೆ, ಕುಡಿಯುವ ನೀರು, ವಿದ್ಯುತ್, ಸ್ವಚ್ಛತೆ ಸೇರಿದಂತೆ ಸಾರ್ವಜನಿಕರು ಎದುರಿಸುತ್ತಿರುವ ಹಲವು ಸಮಸ್ಯೆಗಳ ಕುರಿತು ಗ್ರಾಮಸ್ಥರು ತಮ್ಮ ಅಹವಾಲುಗಳನ್ನು ಸಲ್ಲಿಸಿದರು. ಸಾರ್ವಜನಿಕರಿಂದ ಸ್ವೀಕರಿಸಲಾದ ಮನವಿಗಳನ್ನು ಪರಿಶೀಲಿಸಿ, ಸಮಸ್ಯೆಗಳಿಗೆ ಆದ್ಯತೆಯ ಮೇರೆಗೆ ಪರಿಹಾರ ಒದಗಿಸುವಂತೆ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳಿಗೆ ಸೂಚಿಸಲಾಯಿತು. ಸರ್ಕಾರದ ವಿವಿಧ ಯೋಜನೆಗಳ ಸೌಲಭ್ಯಗಳು ಅರ್ಹ ಫಲಾನುಭವಿಗಳಿಗೆ ತಲುಪುವಂತೆ ಕ್ರಮ ಕೈಗೊಳ್ಳುವ ಭರವಸೆಯನ್ನೂ ನೀಡಲಾಯಿತು.

ಕಾರ್ಯಕ್ರಮವು ಜನರ ಸಮಸ್ಯೆಗಳನ್ನು ನೇರವಾಗಿ ಆಲಿಸಿ, ಆಡಳಿತವನ್ನು ಜನರ ಬಳಿಗೆ ಕೊಂಡೊಯ್ಯುವ ವೇದಿಕೆಯಾಗಿ ಗಮನ ಸೆಳೆಯಿತು.. ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಚಂದ್ರಶೇಖರ ಶಂಬಣ್ಣ ಗಾಳಿ, ತಾಲೂಕ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಾದ ಕೆ.ರಾಜಶೇಖರ್, ಸ್ಥಳೀಯ ಮುಖಂಡರು, , ವಿವಿಧ ಇಲಾಖೆಗಳ ಸಿಬ್ಬಂದಿ ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.

# ED ದಾಳಿ ಕಾಂಗ್ರೆಸ್‌ನ್ನೇ ಗುರಿಯಾಗಿಸಿದೆ: ಕಾಂಗ್ರೆಸ್ ಮುಖಂಡರ ಆರೋಪ

ಅ.ಶ. ಸುದ್ದಿ ಕನಕಗಿರಿ

**ಕನಕಗಿರಿ: ತಾಲೂಕಿನ ಕಾಂಗ್ರೆಸ್ ಕಚೇರಿಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ. ಗಂಗಾಧರ್ ಸ್ವಾಮಿ ಅವರ ನೇತೃತ್ವದಲ್ಲಿ ಪತ್ರಿಕಾಗೋಷ್ಠಿ ನಡೆಯಿತು. ಈ ವೇಳೆ ಕೇಂದ್ರ ಸರ್ಕಾರ ಇಡಿ ಹಾಗೂ ಖಖಿ ಇಲಾಖೆಯನ್ನು ರಾಜಕೀಯ ಉದ್ದೇಶಕ್ಕಾಗಿ ಬಳಸಿಕೊಳ್ಳುತ್ತಿದೆ ಎಂದು ಕಾಂಗ್ರೆಸ್ ಮುಖಂಡರು ಆರೋಪಿಸಿದರು.**



ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗಂಗಾಧರ್ ಕಲಬಗಿಲುಮಠ ಮಾತನಾಡಿ, ಇಡಿ ಹಾಗೂ IT ಅಧಿಕಾರಿಗಳು ಕೇಂದ್ರ ಸರ್ಕಾರದ ಕೈಗೊಂಬೆಗಳಾಗಿ ಕಾಂಗ್ರೆಸ್ ಪಕ್ಷವನ್ನೇ ಗುರಿಯಾಗಿಸಿಕೊಂಡಿದ್ದಾರೆ ಎಂದು ಆರೋಪಿಸಿದರು. ನಂತರ ಮಾತನಾಡಿದ ಹನುಮೇಶ್ ನಾಯಕ್, ಸತೀಶ್ ಜಾರಕಿಹೊಳಿ, ಡಿ.ಕೆ. ಶಿವಕುಮಾರ್, ಬಿ. ನಾಗೇಂದ್ರ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಸೇರಿದಂತೆ ಸುಮಾರು 184 ಕಾಂಗ್ರೆಸ್ ನಾಯಕರನ್ನು ಟಾರ್ಗೆಟ್ ಮಾಡಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬತ್ತದ ಶರಣಪ್ಪ ಮಾತನಾಡಿ, ಬಿಜೆಪಿ ಸರ್ಕಾರದ ಪ್ರಭಾವದಿಂದ ಇಡಿ ಮತ್ತು ಖಖಿ ಇಲಾಖೆಗಳು ಕಾರ್ಯನಿರ್ವಹಿಸುತ್ತಿವೆ ಎಂದು ಆರೋಪಿಸಿದರು. ಈ ವೇಳೆ ಪತ್ರಕರ್ತರು, "ಸುಮಾರು 70 ವರ್ಷ ಕಾಂಗ್ರೆಸ್ ದೇಶದಲ್ಲಿ ಅಧಿಕಾರದಲ್ಲಿದ್ದಾಗ ಇಡಿ ಹಾಗೂ ಖಖಿ ಕ್ರಮಗಳು ಏಕೆ ನಡೆಯಲಿಲ್ಲ? ಆಗ ಈ ಸಂಸ್ಥೆಗಳು ಕಾಂಗ್ರೆಸ್ ಸರ್ಕಾರದ ಕೈಗೊಂಬೆಗಳಾಗಿದ್ದವೇ?" ಎಂದು ಪ್ರಶ್ನಿಸಿದರು. ಅಲ್ಲದೆ ಬಿಜೆಪಿ ನಾಯಕರಾದ ಗಾಲಿ ಜನಾರ್ದನ ರೆಡ್ಡಿ, ಬಿ.ಎಸ್. ಯಡಿಯೂರಪ್ಪ ಹಾಗೂ ಬಿ. ಶ್ರೀರಾಮುಲು ಸೇರಿದಂತೆ ಹಲವರ ವಿರುದ್ಧವೂ ಇಡಿ, ಅಃಖ ಹಾಗೂ ಖಖಿ ಕ್ರಮಗಳು ನಡೆದಿರುವ ಉದಾಹರಣೆಗಳನ್ನು ಪ್ರಸ್ತಾಪಿಸಿದರು.

ಪತ್ರಕರ್ತರ ಪ್ರಶ್ನೆಗಳಿಗೆ ಕಾಂಗ್ರೆಸ್ ಮುಖಂಡರು ಸಮರ್ಪಕ ಉತ್ತರ ನೀಡಲು ಕಕ್ಕಾಬಿಕ್ಕಿಯಾದ ಪ್ರಸಂಗ ನಡೆಯಿತು. ಈ ವೇಳೆ ಇಡಿ, ಖಖಿ ಹಾಗೂ ಅಃಖ ತನಿಖಾ ಸಂಸ್ಥೆಗಳ ಸ್ವಾಯತ್ತತೆ ಕುರಿತು ರಾಜಕೀಯ ಆರೋಪ ಪ್ರತ್ಯಾರೋಪಗಳು ಮುಂದುವರಿದವು. ಈ ಸಂದರ್ಭದಲ್ಲಿ ಕನಕಗಿರಿ ತಾಲೂಕಿನ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕೆ ಗಂಗಾಧರ್ ಸ್ವಾಮಿ ನಗರ ಘಟಕದ ಅಧ್ಯಕ್ಷರಾದ ರವಿ ಎಂ ಪಾಟೀಲ್ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರಾದ ಹನುಮೇಶ್ ನಾಯಕ್ ವೀರೇಶ್ ಸಮ್ಗಂಡಿ ಪಟ್ಟಣ ಪಂಚಾಯಿತಿ ಉಪಾಧ್ಯಕ್ಷರಾದ ಕಂಠೀರಂಗ ನಾಯಕ್ ಪ್ರಮುಖ ಮುಖಂಡರಾದ ಶರಣಪ್ಪ ಬತ್ತದ್ ನಾಗಪ್ಪ ಹುಗ್ಗಿ ಶರಣಪ್ಪ ಹೆಚ್ ಸೋಮಸಾಗರ್ ಕೆಂಚಪ್ಪ ನೀರುಲೂಟಿ ಹಾಗೂ ಅನೇಕ ಮುಖಂಡರು ಉಪಸ್ಥಿತರಿದ್ದರು.

# ಕೊಪ್ಪಳದಲ್ಲಿ ನೂತನ ಕನ್ನಡ ದಿನಪತ್ರಿಕೆಗಳ ಲೋಕಾರ್ಪಣೆ ಗೊಳಿಸಿದ ವಾರ್ತಾಅಧಿಕಾರಿ ಗವಿಸಿದ್ದಪ್ಪ ಹೊಸಮನಿ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ನಗರದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ನೂತನ ಕನ್ನಡ ಪತ್ರಿಕೆಗಳ ಬಿಡುಗಡೆ, ಪುಸ್ತಕ ಲೋಕಾರ್ಪಣೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರಿಗೆ 'ಕರುನಾಡ ಚೇತನ' ಪ್ರಶಸ್ತಿ ಪ್ರದಾನ ಸಮಾರಂಭವು ಸಂಭ್ರಮದಿಂದ ಜರುಗಿತು. ವಿಶಾಲ ಪ್ರಕಾಶನ, ಮಾದಿನೂರು, ಕೊಪ್ಪಳ, ಅಖಿಲ ಭಾರತ ವಚನ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಿಷತ್ತು ಹಾಗೂ ಸಿರಿಗನ್ನಡ ವೇದಿಕೆ, ಕೊಪ್ಪಳ ಇವರ ಸಂಯುಕ್ತ ಆಶ್ರಯದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.**

ಈ ಸಂದರ್ಭದಲ್ಲಿ 'ಕರುನಾಡ ಚೇತನ' ದ್ವಿಮಾಸಿಕ, 'ಈ ನಮ್ಮ ವಿಜಯ ಸೂರ್ಯೋದಯ', 'ಸ್ಫೂರ್ತಿ ಧಾಮ' ಹಾಗೂ 'ಚಾಣಕ್ಯ ಪ್ರಭ' ನೂತನ ಕನ್ನಡ ಪತ್ರಿಕೆಗಳನ್ನು ಲೋಕಾರ್ಪಣೆಗೊಳಿಸಲಾಯಿತು. ಇದೇ ಸಂದರ್ಭದಲ್ಲಿ 'ವೈಜ್ಞಾನಿಕ ಯುಗದಲ್ಲಿ ಮೂಢನಂಬಿಕೆಗಳ ಆರಾಧಕರು' ಎಂಬ ಕೃತಿಯನ್ನೂ ಲೋಕಾರ್ಪಣೆ ಮಾಡಲಾಯಿತು. ಸಾಹಿತ್ಯ, ನ್ಯಾಯಾಂಗ, ಪತ್ರಿಕೋದ್ಯಮ, ಸಮಾಜಸೇವೆ, ಸಂಸ್ಕೃತಿ, ಕಲೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರಿಗೆ 'ಕರುನಾಡ ಚೇತನ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದ ಸ್ವಾಗತ ಹಾಗೂ ಪ್ರಾಸ್ತಾವಿಕ ನುಡಿಗಳನ್ನು ನೆರವೇರಿಸಿದ ಜಿ.ಎಸ್. ಗೋನಾಳ ಮಾತನಾಡಿ, ಕೊಪ್ಪಳ ಜಿಲ್ಲೆಯಲ್ಲಿ ಪತ್ರಿಕೋದ್ಯಮ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಹೊಸ ಬೆಳವಣಿಗೆಗಳು ನಡೆಯುತ್ತಿರುವುದು ಸಂತಸದ ಸಂಗತಿ ಎಂದರು.

ಹಿಂದೆ ಪತ್ರಿಕೆಗಳನ್ನು ಮುದ್ರಿಸಲು ಪಕ್ಕದ ಗದಗ ಜಿಲ್ಲೆಗೆ ತೆರಳಬೇಕಾಗುತ್ತಿತ್ತು. ಆದರೆ ಇದೀಗ ಕೊಪ್ಪಳ ಜಿಲ್ಲೆಯಲ್ಲಿಯೇ ಸುಮಾರು ಆರು ಮುದ್ರಣಾಲಯಗಳು ಕಾರ್ಯನಿರ್ವಹಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ. ಗದಗವನ್ನು ಮುದ್ರಣ ನಗರಿ ಎಂದು ಕರೆಯುವಂತೆ ಮುಂದೊಂದು ದಿನ ಕೊಪ್ಪಳವೂ ಮುದ್ರಣ ನಗರಿಯಾಗಿ ಬೆಳೆಯುವ ವಿಶ್ವಾಸವಿದೆ. ಜಿಲ್ಲೆಯ ಯುವಜನತೆ ಹಾಗೂ ಸಾಹಿತ್ಯಾಸಕ್ತರು ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಶ್ರಮಿಸಬೇಕು ಎಂದು ಹೇಳಿದರು. ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿದ್ದ ಹಿರಿಯ ನ್ಯಾಯವಾದಿ ವಿ.ಎಂ. ಭೂಸನೂರಮಠ ಮಾತನಾಡಿ, ಪತ್ರಿಕೆಗಳು ಸಮಾಜದ ಸಮಸ್ಯೆಗಳನ್ನು ಬೆಳಕಿಗೆ ತರುವುದರ ಜೊತೆಗೆ ಜನರಲ್ಲಿ ಜಾಗೃತಿ ಮೂಡಿಸುವ ಮಹತ್ವದ ಜವಾಬ್ದಾರಿ ಹೊಂದಿವೆ ಎಂದರು. ಪತ್ರಿಕೋದ್ಯಮವು ಕೇವಲ ಸುದ್ದಿಗಳ ಪ್ರಕಟಣೆಗೆ ಸೀಮಿತವಾಗದೆ ಸಮಾಜದ ಅಭಿವೃದ್ಧಿಗೆ ಪೂರಕವಾಗಬೇಕು.

ಯುವ ಪತ್ರಕರ್ತರು ಹಾಗೂ ಸಾಹಿತಿಗಳು ಸಮಾಜಮುಖಿ ಚಿಂತನೆ, ಸತ್ಯನಿಷ್ಠೆ ಮತ್ತು ಜವಾಬ್ದಾರಿಯುತ ಬರವಣಿಗೆಗೆ ಆದ್ಯತೆ ನೀಡಬೇಕು. ಪತ್ರಿಕೆಗಳು ಸಾರ್ವಜನಿಕ ಹಿತಾಸಕ್ತಿಯ ವಿಚಾರಗಳನ್ನು ಎತ್ತಿಹಿಡಿದು ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆಗೆ ಕಾರಣವಾಗಬೇಕು ಎಂದು ಸಲಹೆ ನೀಡಿದರು. 'ವೈಜ್ಞಾನಿಕ ಯುಗದಲ್ಲಿ ಮೂಢನಂಬಿಕೆಗಳ ಆರಾಧಕರು' ಕೃತಿಯನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದ ಹಿರಿಯ ಸಾಹಿತಿ ಡಾ. ರಾಜೇಂದ್ರ ಎಸ್. ಗಡಾದ, ಜಿ.ಎಸ್. ಗೋನಾಳ ಅವರು ಹಲವು ದಶಕಗಳಿಂದ ಸಾಹಿತ್ಯ ಹಾಗೂ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಮುಖ ವ್ಯಕ್ತಿಯಾಗಿದ್ದಾರೆ ಎಂದು ಶ್ಲಾಘಿಸಿದರು.

ಕವಿತೆ, ಕಾದಂಬರಿ ಸೇರಿದಂತೆ ಹಲವು ಕೃತಿಗಳನ್ನು ರಚಿಸಿರುವ ಗೋನಾಳ ಅವರು ಪತ್ರಿಕೋದ್ಯಮದ ಮೂಲಕವೂ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಡಿಜಿಟಲ್ ಯುಗದಲ್ಲಿಯೂ



ಮುದ್ರಿತ ಪತ್ರಿಕೆಗಳು ಹಾಗೂ ಪುಸ್ತಕಗಳ ಮಹತ್ವ ಕಡಿಮೆಯಾಗಿಲ್ಲ ಎಂದು ಹೇಳಿದರು. ಇಂದಿನ ವೈಜ್ಞಾನಿಕ ಯುಗದಲ್ಲಿಯೂ ಗ್ರಾಮೀಣ ಪ್ರದೇಶಗಳಲ್ಲಿ ಮಾಟ, ಮಂತ್ರ, ವಾಮಾಚಾರ ಹಾಗೂ ವಿವಿಧ ಮೂಢನಂಬಿಕೆಗಳ ಆಚರಣೆಗಳು ಕಂಡುಬರುತ್ತಿವೆ. ಇಂತಹ ಸಾಮಾಜಿಕ ಸಮಸ್ಯೆಗಳ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಕೃತಿ ರಚನೆಯಾಗಿರುವುದು ಮಹತ್ವದ ವಿಚಾರವಾಗಿದೆ. ಜನರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವ ನಿಟ್ಟಿನಲ್ಲಿ ಇಂತಹ ಕೃತಿಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದು ಅಭಿಪ್ರಾಯಪಟ್ಟರು.'ಕರುನಾಡ ಚೇತನ' ಪತ್ರಿಕೆಯನ್ನು ಬಿಡುಗಡೆಗೊಳಿಸಿ ಮಾತನಾಡಿದ ಬಳ್ಳಾರಿ ವಿಭಾಗದ ಹಿರಿಯ ಕಾನೂನು ನ್ಯಾಯವಾದಿ ಬಿ.ಎಸ್. ಪಾಟೀಲ, ಒಂದು ಪತ್ರಿಕೆ ಆರಂಭವಾಗುವುದು ಎಂದರೆ ಕೇವಲ ಪ್ರಕಟಣೆಯ ಆರಂಭವಲ್ಲ; ಅದು ಸಮಾಜದಲ್ಲಿ ಬದಲಾವಣೆ ತರುವ ಶಕ್ತಿಯ ಆರಂಭವಾಗಿದೆ ಎಂದು ಹೇಳಿದರು.

ಜಿ.ಎಸ್. ಗೋನಾಳ ಅವರ ಪತ್ರಿಕೋದ್ಯಮ ಹಾಗೂ ಸಾಹಿತ್ಯ ಸೇವೆಯನ್ನು ಶ್ಲಾಘಿಸಿದ ಅವರು, ಪತ್ರಿಕೆ ನಡೆಸುವುದು ಸುಲಭದ ಕೆಲಸವಲ್ಲ. ಇಂದಿನ ಡಿಜಿಟಲ್ ಯುಗದಲ್ಲಿ ಪತ್ರಿಕೆಗಳನ್ನು ನಿರಂತರವಾಗಿ ನಡೆಸಲು ಶ್ರಮ, ಸಮಯ ಹಾಗೂ ಆರ್ಥಿಕ ಸಂಪನ್ಮೂಲಗಳ ಅಗತ್ಯವಿದೆ ಎಂದರು. ಸಮಾಜದ ಸಮಸ್ಯೆಗಳನ್ನು ಗುರುತಿಸಿ ಅವುಗಳನ್ನು ಜನರ ಮುಂದಿಡುವ ಮೂಲಕ ಪರಿಹಾರದ ದಿಕ್ಕಿನಲ್ಲಿ ಕೆಲಸ ಮಾಡುವುದು ಪತ್ರಿಕೋದ್ಯಮದ ಪ್ರಮುಖ ಜವಾಬ್ದಾರಿಯಾಗಿದೆ. ಪತ್ರಿಕೆಗಳು ಸತ್ಯ, ನ್ಯಾಯ ಹಾಗೂ ಸಾರ್ವಜನಿಕ ಹಿತಾಸಕ್ತಿಗೆ ಬದ್ಧವಾಗಿರಬೇಕು ಎಂದು ತಿಳಿಸಿದರು.

'ಸ್ಫೂರ್ತಿ ಧಾಮ' ಹಾಗೂ 'ಚಾಣಕ್ಯ ಪ್ರಭ' ನೂತನ ಕನ್ನಡ ಪತ್ರಿಕೆಗಳನ್ನು ಬಿಡುಗಡೆಗೊಳಿಸಿ ಮಾತನಾಡಿದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ಗವಿಸಿದ್ದಪ್ಪ ಹೊಸಮನಿ, ಪತ್ರಿಕೆ ಆರಂಭಿಸುವ ಸಂದರ್ಭದಲ್ಲಿ ಇರುವ ಉತ್ಸಾಹ ಹಾಗೂ ಬದ್ಧತೆ ಕೊನೆಯವರೆಗೂ ಮುಂದುವರಿಯಬೇಕು ಎಂದು ಹೇಳಿದರು.ಪತ್ರಿಕೆಗಳನ್ನು ನಿರಂತರವಾಗಿ ನಡೆಸಿಕೊಂಡು ಹೋಗುವುದು ಮಹತ್ವದ ಜವಾಬ್ದಾರಿಯಾಗಿದೆ. ಪತ್ರಿಕೆಗಳು ಸಂಬಂಧಿಸಿದ ಮಾರ್ಗಸೂಚಿಗಳು ಹಾಗೂ ನಿಯಮಗಳನ್ನು ಪಾಲಿಸಿಕೊಂಡು ಕಾರ್ಯನಿರ್ವಹಿಸಬೇಕು. ಸುದ್ದಿಗಳ ನಿಖರತೆ, ಸಾರ್ವಜನಿಕ ಹಿತಾಸಕ್ತಿ, ಪತ್ರಿಕೆಯ ಗುಣಮಟ್ಟ ಹಾಗೂ ವೃತ್ತಿಪರ ಬದ್ಧತೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಯುವ ಪತ್ರಕರ್ತರಿಗೆ ಸಲಹೆ ನೀಡಿದರು.

ಹೊಸದಾಗಿ ಬಿಡುಗಡೆಯಾಗಿರುವ ಪತ್ರಿಕೆಗಳು ಜಿಲ್ಲೆಯ ಜನರ ಸಮಸ್ಯೆಗಳಿಗೆ ಧ್ವನಿಯಾಗುವ ಮೂಲಕ ಉತ್ತಮ ಹೆಸರು ಗಳಿಸಲಿ ಎಂದು ಶುಭ ಹಾರೈಸಿದರು.'ಈ ನಮ್ಮ ವಿಜಯ ಸೂರ್ಯೋದಯ' ಪತ್ರಿಕೆಯನ್ನು ಬಿಡುಗಡೆಗೊಳಿಸಿ ಮಾತನಾಡಿದ ಕರ್ನಾಟಕ ಚಲನಚಿತ್ರ ಅಕಾಡೆಮಿಯ ಸದಸ್ಯೆ ಸಾವಿತ್ರಿ ಮುಜುಮದಾರ, ನೂತನ ಪತ್ರಿಕೆಗಳ ಸಂಪಾದಕರಿಗೆ ಅಭಿನಂದನೆ ಸಲ್ಲಿಸಿದರು.ಕನ್ನಡ ಭಾಷೆ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪತ್ರಿಕೆಗಳು ನೀಡುವ ಕೊಡುಗೆ ಮಹತ್ವದ್ದಾಗಿದೆ. ಹೊಸ ಪತ್ರಿಕೆಗಳು ಬರಹಗಾರರು, ಸಾಹಿತಿಗಳು, ಕಲಾವಿದರು ಹಾಗೂ ಸಮಾಜಮುಖಿ ಚಿಂತಕರಿಗೆ ವೇದಿಕೆಯಾಗಬೇಕು. ಕನ್ನಡ ನಾಡು-ನುಡಿಯ ಬೆಳವಣಿಗೆಗೆ ಪೂರಕವಾದ ಕಾರ್ಯಗಳನ್ನು ಮಾಡಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಎಂ. ಸಾದಿಕ್ ಅಲಿ ಮಾತನಾಡಿ, ಪತ್ರಿಕೋದ್ಯಮದ ಜವಾಬ್ದಾರಿ, ಸಮಾಜದ ಸಮಸ್ಯೆಗಳ ಕುರಿತು ವರದಿ ಮಾಡುವ ಅಗತ್ಯ ಹಾಗೂ ಪತ್ರಿಕೆಗಳ ನಿರಂತರ ಕಾರ್ಯನಿರ್ವಹಣೆಯ ಕುರಿತು ಅಭಿಪ್ರಾಯ ವ್ಯಕ್ತಪಡಿಸಿದರು. ಪತ್ರಕರ್ತರು ಜನರ ಸಮಸ್ಯೆಗಳಿಗೆ ಸ್ಪಂದಿಸುವ ಮನೋಭಾವ ಹೊಂದಿರಬೇಕು. ಸುದ್ದಿಗಳ ನಿಖರತೆ ಹಾಗೂ ವಾಸ್ತವಾಂಶಗಳಿಗೆ ಆದ್ಯತೆ ನೀಡಿ ಸಾರ್ವಜನಿಕ ಹಿತಾಸಕ್ತಿಯ ಪತ್ರಿಕೋದ್ಯಮ ನಡೆಸಬೇಕು ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ನ್ಯಾಯಾಂಗ, ಸಮಾಜಸೇವೆ, ಮಾಧ್ಯಮ, ಸಾಹಿತ್ಯ, ಕಲೆ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರಿಗೆ 'ಕರುನಾಡ ಚೇತನ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ನೂತನ ಪತ್ರಿಕೆಗಳ ಬಿಡುಗಡೆ, ಪುಸ್ತಕ ಲೋಕಾರ್ಪಣೆ ಹಾಗೂ ಸಾಧಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭವು ಕೊಪ್ಪಳ ಜಿಲ್ಲೆಯ ಸಾಹಿತ್ಯ, ಸಾಂಸ್ಕೃತಿಕ ಹಾಗೂ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಹೊಸ ಚೈತನ್ಯ ಮೂಡಿಸಿತು. ವಿವಿಧ ಕ್ಷೇತ್ರಗಳ ಗಣ್ಯರು, ಸಾಹಿತಿಗಳು, ಪತ್ರಕರ್ತರು ಹಾಗೂ ಸಾಹಿತ್ಯಾಸಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸಿ ನೂತನ ಪತ್ರಿಕೆಗಳು ಹಾಗೂ ಕೃತಿಯ ಯಶಸ್ಸಿಗೆ ಶುಭ ಹಾರೈಸಿದರು. ಕಾರ್ಯಕ್ರಮದ ಆರಂಭದಲ್ಲಿ ಎಸ್.ಎಸ್. ಬೆಲ್ಲದ ಅವರು ಪ್ರಾರ್ಥನೆ ಸಲ್ಲಿಸಿದರು. ನಂತರ ಜಿ. ಎಸ್. ಗೋನಾಳ ಅವರು ಸ್ವಾಗತ ಹಾಗೂ ಪ್ರಾಸ್ತಾವಿಕ ನುಡಿಗಳನ್ನು ನೆರವೇರಿಸಿದರು. ಆನಂದ ಎನ್. ಹಳ್ಳಿಗುಡಿ ಕಾರ್ಯಕ್ರಮವನ್ನು ನಿರೂಪಿಸಿದರು. ಕೊನೆಯಲ್ಲಿ ಉದಯ ತೋಟದ ವಂದನಾರ್ಪಣೆ ಸಲ್ಲಿಸಿದರು.

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka